
₹ 5/-

# ನೇಸರು


## ತಿಂಗಳೋಲೆ

PAGES 20

OCTOBER 2023 Nesaru Tingalole Vol. XLI - 10






## ಮೈಸೂರು ಅಸೋಸಿಯೇಷನ್ ಮುಂಬೈ


## THE MYSORE ASSOCIATION, BOMBAY

393, Bhau Daji Road, Matunga, Mumbai - 400 019. । Tel.: 2403 7065
Email : mysoreassociation.mumbai@gmail.com

# 50ನೇ ವಾರ್ಷಿಕ ವಿವಾಹ ದಿನದ ಶುಭಾಶಯಗಳು

ಶ್ರೀ ಸೀತಾರಾಂ ಮತ್ತು ಶ್ರೀಮತಿ ಲಕ್ಷ್ಮಿಯವರು ನಮ್ಮ ಅಸೋಸಿಯೇಶನ್‌ನ ಆಜೀವ ಸದಸ್ಯರು. ಇವರ ತಂದೆ ಕೇಶವ ಮೂರ್ತಿಗಳು ಕೂಡ ಅಸೋಸಿಯೇಶನ್‌ನ ಆಜೀವ ಸದಸ್ಯರಾಗಿದ್ದರು. ಸೀತಾರಾಂ ಅವರು ಚಿಕ್ಕಂದಿನಿಂದ ಅಸೋಸಿಯೇಶನ್ ಜೊತೆಯಲ್ಲೇ ಬೆಳೆದವರು. ಅಸೋಸಿಯೇಶನ್ ಹಿಂದಿನ ರಸ್ತೆಯಲ್ಲಿ ವಾಸಿಸುತ್ತಿದ್ದರು. ದಿನಾಲು ಅಸೋಸಿಯೇಶನ್‌ಗೆ ಬಂದು ಟೇಬಲ್ ಟೆನ್ನಿಸ್, ಬಾಸ್ಕೆಟ್ ಬಾಲ್ ಮುಂತಾದ ಆಟ ಆಡುತ್ತಿದ್ದರು. ಅವರು ಬಾಸ್ಕೆಟ್ ಬಾಲ್ ಆಟದಲ್ಲಿ ನಿಷ್ಣಾತರು. ಮೂರು ವರ್ಷ ಮುಂಬಯಿ ವಲಯದ ಅಸೋಸಿಯೇಶನ್ ತಂಡದಲ್ಲಿ ಆಡಿ ಪ್ರಥಮ ಸ್ಥಾನದ ಗೆಲುವಿಗೆ ಕಾರಣರಾಗಿದ್ದರು.





19–10–1973ಯಲ್ಲಿ ಶ್ರೀಮತಿ ಲಕ್ಷ್ಮಿಯವರೊಡನೆ ಅವರ ವಿವಾಹವಾಯ್ತು. ಲಕ್ಷ್ಮಿಯವರ ತಂದೆ ಶ್ರೀ. ಕೃಷ್ಣ ತುಪ್ಪ. ಅವರ ತಂದೆ ಕೂಡ ಕಲಾವಿದರಾಗಿದ್ದರು. ಇವರ ಅಕ್ಕ ಶಾಂತ ಅವರು ರಂಗಭೂಮಿ ಮತ್ತು ದೂರದರ್ಶನದ ಕಲಾವಿದೆ. ವಿವಾಹದ ನಂತರ ಲಕ್ಷ್ಮೀಯವರು ಅಸೋಸಿಯೇಶನ್‌ನ ಕಲಾತಂಡದ ಕಾಯಂ ಸದಸ್ಯೆಯಾಗಿದ್ದಾರೆ.

ಈ ದಂಪತಿಗೆ ಇಬ್ಬರು ಮಕ್ಕಳು. ಮಗ ರಘುರಾಂ ಈಗ ಮಗಳು ಲೋಕಾವ್ಯ ಜೊತೆ ಕೆನಡಾದಲ್ಲಿ ವಾಸವಾಗಿದ್ದಾನೆ. ಮಗಳು ಅರ್ಚನಾ ಅವಳ ಮಗಳು ರಾಸಿಜಾ ಮತ್ತು ಪತಿ ಸಂಜಯನೊಡನೆ ಪುಣೆಯಲ್ಲಿ ವಾಸವಾಗಿದ್ದಾಳೆ.

ಶ್ರೀ ಸೀತಾರಾಂ ಮತ್ತು ಶ್ರೀಮತಿ ಲಕ್ಷ್ಮಿಯವರ ವಿವಾಹವಾಗಿ 19–10–2023ಕ್ಕೆ 50 ವರ್ಷಗಳು ಪೂರ್ಣವಾಗುತ್ತದೆ.

**ಈ ದಂಪತಿಗೆ ಅವರ ವಿವಾಹದ ಸುವರ್ಣ ವಾರ್ಷಿಕೋತ್ಸವಕ್ಕೆ ಹಾರ್ದಿಕ ಶುಭಾಶಯಗಳು.**





ನೇಸರು ತಿಂಗಳೋಲೆ

ಸಂಪುಟ -41 ಅಕ್ಟೋಬರ್- 2023 ಸಂಚಿಕೆ-10

# ಆತ್ಮಸ್ಥೈರ್ಯ ರೂಢಿಸಿಕೊಳ್ಳಿ



✍ **ಡಾ. ಜ್ಯೋತಿ ಸತೀಶ್**

ಆತ್ಮಸ್ಥೈರ್ಯ ಮನುಷ್ಯನ ಬದುಕಿನಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆತ್ಮಸ್ಥೈರ್ಯ ಇಲ್ಲದಿದ್ದರೆ ಮನುಷ್ಯನಿಗೆ ಬದುಕಲು ಸಾಧ್ಯವಿಲ್ಲ. ಇನ್ನು ಕೆಲವ್ರು ಬಂದದ್ದೆಲ್ಲ ಬರಲಿ ಭಗವಂತನ ದಯೆಯೊಂದಿರಲಿ ಎಂದು ನಗು ನಗುತ್ತಾ ಬಾಳುವುದನ್ನು ಕಾಣಬಹುದು. ಆತ್ಮಸ್ಥೈರ್ಯದಿಂದ ನಮ್ಮಲ್ಲಿರುವ ಊನತೆಗಳು ಅಥವಾ ದೌರ್ಬಲ್ಯಗಳು ನಮಗೆ ಗೊತ್ತಿಲ್ಲದಂತೆ ಗೌಣವಾಗಿ ಬಿಡುತ್ತದೆ. ನಮ್ಮ ಮನೋಬಲ ದೃಢವಾಗಿದ್ದರೆ ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಮ್ಮ ಮನಸ್ಸು ಹಿಂದೆ ಸರಿಯುವುದಿಲ್ಲ. ಈ ಜಗತ್ತಿನಲ್ಲಿ ನಾನು, ನನ್ನದು ಎನ್ನುವುದು ಯಾವುದೂ ಶಾಶ್ವತವಲ್ಲ. ನಾವು ನಾವು ಮಾಡಿರುವ ಒಳ್ಳೆಯ ಕರ್ಮ ಮಾತ್ರ ಕೊನೆಯಲ್ಲಿ ಉಳಿಯೋದು ಎನ್ನುವ ಸತ್ಯವನ್ನು ತಿಳಿದುಕೊಂಡು ಯಾರು ಬದುಕುತ್ತಾರೋ ಅವರ ಜೀವನ ಸಾರ್ಥಕವಾದಂತೆ.

ನಮ್ಮ ದೌರ್ಬಲ್ಯಗಳನ್ನೇ ವೈಕಲ್ಯಗಳೆಂದು ಭಾವಿಸುವ ನಾವು ಯಶಸ್ಸಿನೆಡೆಗೆ ದಾಪುಗಾಲಿಡುತ್ತ ಸಾಗುವಾಗ ಎಡವಿ ಬೀಳುವುದು ಸಹಜ. ಅಲ್ಲಿಂದ ಮುಂದೆ ಸಾಗುವ ಪ್ರಯತ್ನ ಮಾಡುವುದೇ ಇಲ್ಲ. ಆದರೆ ತಮ್ಮ ವೈಫಲ್ಯಗಳನ್ನೇ 'ವೈಕಲ್ಯ'ಗಳೆಂದು ಭಾವಿಸದೆ ಸಾಫಲ್ಯತೆಯೆಡೆಗೆ ಹೆಜ್ಜೆ ಹಾಕುತ್ತಿರುವ ಸುಕೋಮಲ ಮನಸ್ಸುಗಳನ್ನು ಈ ಜಗತ್ತು ಕಂಡಿದೆ ಎನ್ನುವುದನ್ನು ನಾವು ಕಡೆಗಣಿಸುವಂತಿಲ್ಲ. ನಮ್ಮಲ್ಲಿ ಎಲ್ಲ ತರಹ ಜೀವನವನ್ನು ನಡೆಸುತ್ತಿರುವವರು ಇದ್ದಾರೆ. ರಾತ್ರಿ ಬೆಳಗಾಗುವುದರೊಳಗೆ ನನಗೆ ಆತ್ಮಸ್ಥೈರ್ಯ ಬರಬೇಕೆಂದು ಬಯಸುವುದು ನಮ್ಮ ಮೂರ್ಖತನವಷ್ಟೇ. ಇನ್ನು ಕೆಲವರಿಗೆ ಆತ್ಮಸ್ಥೈರ್ಯ ಎಂದ ಪದದ ಪರಿಚಯವೇ ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಆತ್ಮಸ್ಥೈರ್ಯವನ್ನು ರೂಢಿಸಿಕೊಳ್ಳಬೇಕೆಂದು ದಿನವಿಡಿ ಅದರ ಬಗ್ಗೆನೇ ಯೋಚಿಸಿದರೂ ಅದು ನಮ್ಮ ಪಾಲಿಗೆ ದಕ್ಕುವುದಿಲ್ಲ. ಬದುಕಿನಲ್ಲಿ ಎದುರಾಗುವ ಸವಾಲುಗಳಿಗೆ ಭಯಪಡದೆ ಧೈರ್ಯದಿಂದ ಎದುರಿಸುತ್ತಾ ಹೋದಂತೆ ನಮ್ಮಲ್ಲಿ ಒಂದು ರೀತಿಯ ಆತ್ಮಸ್ಥೈರ್ಯ ಉದ್ಭವಾಗುತ್ತದೆ. ಹೋದ ಸಲ ಬಂದ ಕಷ್ಟಕಿಂತ ಇದೆಂತ ಮಹಾನ್! ಇದನ್ನು ಎದುರಿಸಿಯೇ ತೀರುತ್ತೇನೆಂಬ ನಮ್ಮ ಛಲ ನಮ್ಮ ಮನದಲ್ಲಿ ಮೂಡುತ್ತದೆ. ಒಪ್ಪಿಸಿದ ಕೆಲಸವನ್ನು ಹಾಗೋ ಹೀಗೋ ಮುಗಿಸಿಬಿಡುವಂತಹದ್ದನ್ನು ನಾವು ಬಹಳಷ್ಟು ಮಂದಿ ರೂಢಿಸಿಕೊಂಡು ಬಿಟ್ಟಿದ್ದೇವೆ. ಆದರೆ ನಿರ್ದಿಷ್ಟವಾಗಿ ಈ ಕೆಲಸವನ್ನೇ ಮಾಡುತ್ತೇನೆ, ಇದನ್ನು ಮಾಡಲು ನಾನೇ ಯೋಗ್ಯವಾದ ವ್ಯಕ್ತಿಯೆಂದು ವಿಶ್ವಾಸವಿಟ್ಟು ಒಂದು ನಿರ್ದಿಷ್ಟ ಸಮಯದಲ್ಲಿ ಅದನ್ನು ಅಚ್ಚುಕಟ್ಟಾಗಿ ಮುಗಿಸಲು ಅಗತ್ಯವಿರುವ ಅಂಶವೇ ಆತ್ಮಸ್ಥೈರ್ಯ. ಇದು ನಮ್ಮ ಬದುಕಿನ ಅವಿಭಾಜ್ಯ ಅಂಗವೆಂದು ಪರಿಗಣಿಸಿ ಆತ್ಮಸ್ಥೈರ್ಯದಿಂದೊಡಗೂಡಿದ ಪ್ರಯತ್ನದಲ್ಲಿ ತೊಡಗಿಸಿಕೊಂಡಾಗ ಮಾತ್ರ ನಮಗೆ ಯಶಸ್ಸು ಸಿಗಲು ಸಾಧ್ಯ. ಯಾವುದೇ ವ್ಯಕ್ತಿ ಸಾಧಕರಾಗಬೇಕಾದಲ್ಲಿ ಆತ್ಮಸ್ಥೈರ್ಯ ಆತ್ಮವಿಶ್ವಾಸ, ನಿರಂತರ ಪರಿಶ್ರಮ ಅತ್ಯಗತ್ಯ. ನಮ್ಮಲ್ಲಿ ಇನ್ನೊಬ್ಬರ ಏಳಿಗೆಯ ಮೇಲೆ ನಮ್ಮ ಚಿತ್ತವಿರುತ್ತದೆಯೇ ಹೊರತು, ತಮ್ಮಲ್ಲಿ ಏನಾಗುತ್ತಿದೆ ಅನ್ನುವುದರ ಪರಿವೇ ಇರುವುದಿಲ್ಲ. ಅವರಲ್ಲಿ ಇದ್ದದ್ದು ತನ್ನಲ್ಲಿ ಇಲ್ಲವೆಂಬ ಕೊರಗೇ ಹೊರತು, ತನ್ನಲ್ಲಿರುವುದರ ಬಗ್ಗೆ ಕೃತಜ್ಞತೆಯ ಭಾವ ಎಲ್ಲೋ ಮರೆತು ಬಿಟ್ಟಿರುತ್ತೇವೆ.

ಬೀಜ ಹಾಕಿದ ಕೂಡಲೇ ಅದು ಮರವಾಗುವುದಿಲ್ಲ. ಅದು ಮೊಳಕೆಯೊಡೆದು ಗಿಡವಾಗಿ ಬೆಳೆಯುತ್ತಾ ಬೃಹದಾಕಾರ ಪಡೆಯುವುದು. ಹಾಗೆಂದು ತನಗಿಂತ ಎತ್ತರವಾಗಿ ಬೆಳೆದ ಮರವನ್ನು ನೋಡಿ ಆಗಷ್ಟೇ ಮೊಳಕೆಯೊಡೆದು ಹೊರಬರುತ್ತಿರುವ ಸಸ್ಯ ಹೆದರಿ ಮುದುಡಿಕೊಳ್ಳುವುದಿಲ್ಲ. ಅದಕ್ಕೆ ಅದರ ಸಾಮರ್ಥ್ಯದ ಮೇಲೆ ಪೂರ್ಣ ವಿಶ್ವಾಸವಿದೆ. ಇಷ್ಟು ಎತ್ತರದ ಮರದ ನಡುವೆ ತನ್ನ ಅಸ್ತಿತ್ವ ಇಲ್ಲ ಎಂದು ಭಾವಿಸುವುದಿಲ್ಲ. ತನಗೆ ಸಿಕ್ಕಿದ ಜಾಗವನ್ನು ಸಂಪೂರ್ಣ ವಿನಿಯೋಗಿಸಿಕೊಳ್ಳುತ್ತದೆ. ಆದರೆ ನಾವು ಮನುಷ್ಯರು ನಮ್ಮೊಳಗೆ ಶಕ್ತಿ ಇದ್ದರೂ ಅದರ ಅರಿವಿಲ್ಲದೆ ನನ್ನಿಂದ ಇದು ಸಾಧ್ಯವಾಗಬಹುದೇ ಎಂದು ಯೋಚಿಸುತ್ತಾ ಹಿಂದೆ ಸರಿಯುತ್ತೇವೆ. ಇದರಿಂದ ನಮಗೆ ದಕ್ಕಬೇಕಾದ ಅವಕಾಶಗಳು ನಮ್ಮ ಕೈತಪ್ಪಿ ಹೋಗುವ ಸಾಧ್ಯತೆ ಇದೆ. ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ. ಅದನ್ನು ರೂಪಿಸುವವರು ನಾವೇ. "ಯಾರು ತಮ್ಮೊಳಗೆ ಒಂದು ಅಗಾಧವಾದ ಶಕ್ತಿಯನ್ನು ಸಾಂದರ್ಭಿಕತೆಗಿಂತ ದೊಡ್ಡದೆಂದು, ಸ್ಥೈರ್ಯದಿಂದ ನಂಬಿರುತ್ತಾರೋ, ಅಂತಹವರನ್ನು ಬಿಟ್ಟು, ಬೇರಾರಿಂದಲೂ ಪ್ರಶಂಸನೀಯವಾದುದನ್ನು ಎಂದೂ ಸಾಧಿಸಲಾಗಿಲ್ಲ" ಎನ್ನುವ ಬ್ರೂಸ್ ಬಾರ್ಟನ್ ಅವರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:

ನೇಸರು

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com

Website:
www.mysoreassociation.in

# ಕಡಲ ಹಾದಿ



(ಉಮಾ ರಾವ್ ಕಥೆಗಳು)

✍ **ಉಮಾ ರಾವ್**

ಸೋನಿ ದಮನ್ ಗೆ ಹೊರಟು ನಿಂತಳು. "ಹೋಗಿ ಬರಲೇ" ಎಂದು ಯಾರನ್ನು ಕೇಳದೆಯೇ. "ಹೋಗಿ ಬರುತ್ತೇನೆ ಎಷ್ಟು ದಿನ ಹಿಡಿಸುತ್ತೋ ಗೊತ್ತಿಲ್ಲ" ಎಂದಷ್ಟೇ ಹೇಳಿ, ಬ್ಯಾಗಿನಲ್ಲಿ ನಾಲ್ಕು ಜೊತೆ ಬಟ್ಟೆ ತುಂಬಿಕೊಂಡು ದುಡ್ಡು ಎಣಿಸುತ್ತಿರುವಾಗಲು ತಾನು ಮಾಡುತ್ತಿರುವುದು ಹುಚ್ಚು ಕೆಲಸ ಎಂದು ಅವಳಿಗೆ ಅನ್ನಿಸುತ್ತಲೆ ಇತ್ತು. "ನಾನು ಜೊತೆಗೆ ಬರಲೇ" ಎಂದು ಅಮ್ಮ ಅನುಮಾನಿಸುತ್ತಾ ಅಂದಾಗ ಕಿರಿಕಿರಿಯಾದರು ಅದನ್ನು ತೋರಿಸಿರದೆ "ಬೇಡ" ಅಂದಳು ಮೊಟಕಾಗಿ. ಹೊರಡುವ ಮುಂಚೆ ಪ್ರೀತಿನ ಕರೆದು "ಅಜ್ಜಿ ಹೇಳಿದ ಹಾಗೆ ಕೇಳಿಕೊಂಡು ಜಾಣೆಯಾಗಿರು ಬೇಗ ಬಂದ್ಬಿಡ್ತೀನಿ" ಎಂದಷ್ಟೇ ಹೇಳಿ ಮುತ್ತು ಕೊಟ್ಟಳು.

ಆ ಪಾರ್ಕಿನಲ್ಲಿ ಅವನನ್ನು ಕಂಡ ತಕ್ಷಣ ಬೆಚ್ಚಿಬಿದ್ದೆವು. ಥೇಟ್ ಮಾಧವ. ಹೌದು ಸೋನಿ. ಮಾಧವನೇ ಅಂತ ಇಬ್ಬರಿಗೂ ಅನ್ನಿಸ್ತು. ಅದೇ ಮುಖ, ಎತ್ತರ ಎಲ್ಲಾ, ಗಡ್ಡ ಬಿಟ್ಟಿದ್ದ ಅಷ್ಟೇ, ಐದು ನಿಮಿಷ ಹಾಗೆ ಹೀಗೆ ನೋಡಿ ಮಾತಾಡಿಸಿ ಬಿಡೋಣ ಅಂತ ಧೈರ್ಯ ಮಾಡಿ ಹೋದರೆ ಇದ್ದಕ್ಕಿದ್ದಂತೆ ವ್ಯಕ್ತಿ ಪತ್ತೆ ಇಲ್ಲ! ಹುಡುಕಿ ಹುಡುಕಿ ಸಾಕಾಯ್ತು. ಇದೆಲ್ಲಾ ಏನು ಬರೀ ಭ್ರಮೆ ಏನೋ ಅನಿಸೋ ಹಾಗೆ, ಸೋನಿ. "ಅದು ಖಂಡಿತ ಮಾಧವನೇ" ಸುಷ್ಮಾ ಸುಂದರ್ ಅಂದಿದ್ದು ಕಿವಿಯಲ್ಲಿ ಮೊಳಗುತ್ತಲೇ ಇತ್ತು. ಅವಳು ದಮನ್ ನಲ್ಲಿ ಬಂದಿಳಿದಾಗ ಬಸ್ಸಿನಿಂದ ನಡೆಯುತ್ತಲೇ ರಿಕ್ಷಾದವನಿಗೆ 'ಸಾಗರ್ ಲಾಜ್'' ಎಂದಿದ್ದು ಸುಷ್ಮಾ ಸುಂದರ್ ಕೂಡ ಅಲ್ಲೇ ಇದ್ದರು ಎಂಬ ಒಂದೇ ಒಂದು ಕಾರಣದಿಂದ. ಗಿಡ ಮರಗಳ ಮಧ್ಯೆ ಪುಟ್ಟ ಪುಟ್ಟ ಹಸಿರು ಬಣ್ಣದ ಕಾಟೇಜುಗಳಿದ್ದ ಸಾಗರ್ ಲಾಡ್ಜ್ ತಲುಪಿದಾಗ ಮ್ಯಾನೇಜರ್ ಇವಳನ್ನು ಒಂದು ಸಲ ಮೇಲಿಂದ ಕೆಳಗೆ ನೋಡಿದ. "ನೀವೆಷ್ಟು ಜನ ಇದ್ದೀರಿ" ಎನ್ನುತ್ತಾ," ಒಬ್ಬಳೇ, ಸಿಂಗಲ್ ರೂಮ್ ವಿಥ್ ಅಟ್ಯಾಚ್ ಬಾತ್ ಕೊಡಿ" ಎಂದಳು ಸೋನಿ.

ಬ್ಯಾಗಿಂದ ಸೋಪು, ಟವೆಲ್ ತೆಗೆದು ಸೋನಿ ಮೊದಲು ಸ್ನಾನ ಮಾಡಿ ತಲೆ ಬಾಚಿಕೊಂಡಳು. ಕಾಫಿ ತಿಂಡಿಗೆ ಫೋನ್ ಮಾಡಿ ವರಾಂಡದಲ್ಲಿ ಬಂದು ಕುಳಿತಳು. ಸುತ್ತಲು ಮರಗಳು ನೆಲದ ತುಂಬಾ ನೆರಳು ಬೆಳಕಿನ ಚಿತ್ತಾರ ಹಿಂದೆಲ್ಲೋ ಮರೆಯುತ್ತಿದ್ದ ಸಮುದ್ರದ ದನಿ. ಮೇಲುವಾಗಿ ಬೀಸುತ್ತಿದ್ದ ಗಾಳಿ ಸುತ್ತಲೂ ಗುಬ್ಬಚ್ಚಿಗಳು ಚಿಲಿಪಿಲಿ ಗುಟ್ಟುತ್ತಾ ಏನನ್ನು ಹೆಕ್ಕುತ್ತಿದ್ದುವು. ಜೀರಜಿಂಬೆಯೊಂದು ಗುಯಿಗುಡುತ್ತಿತ್ತು. ಪಕ್ಕದ ಕಾಲೇಜಿನ ಮುಂದೆ ಮಗುವೊಂದು ಹ್ಯಾಮಕ್ಕಿನಲ್ಲಿ ತೂಗಿ ಕೊಳ್ಳುತ್ತಿತ್ತು. ಎಲ್ಲಿಂದಲೋ ಕಿತ್ತು ಬಂದಿದ್ದ ಗಾಳಿಪಟ ಮುಂದಿದ್ದ ಕಂಬಕ್ಕೆ ಸಿಕ್ಕಿಹಾಕಿಕೊಂಡು ಪಟಪಟ ಮಾಡುತ್ತಿತ್ತು. ಸೋನಿ ನಿಧಾನವಾಗಿ ಕಣ್ಮುಚ್ಚಿದಳು. ಎಲ್ಲಿಂದ ಪ್ರಾರಂಭಿಸುವುದು? ದಡಬಡನೆ ಬಂದ ಹೋಟೆಲ್ ಹುಡುಗ ಹೊಗೆಯಾಡುವ ಪೋಹ ಕಾಫಿ ತಂದಿಟ್ಟ. "ಇಲ್ಲಿ ಹತ್ತಿರವೇ ಒಂದು ದೊಡ್ಡ ಪಾರ್ಕಿದೆಯಲ್ಲ" ಅವನನ್ನು ಕೇಳಿದಳು. "ಹೌದು ಮೇಮ್ ಸಾಬ್ ಐದು ನಿಮಿಷದ ರಸ್ತೆ. ಬೀಚಿನ ಮೇಲೆ ಇದೆ. ಬಹುತ್ ಬಡಿಯಾ ಹೈ" ಎಂದ. ಮೊದಲು ಹೊಟ್ಟೆ ತುಂಬಿಸಿಕೊಂಡು ನಂತರ ಎಲ್ಲ ಪ್ಲಾನ್ ಮಾಡುವುದೆಂದುಕೊಳ್ಳುತ್ತ ತಟ್ಟೆ ಎತ್ತಿಕೊಂಡಳು.

ಹೀಗಾಗುವುದು ಅಂತ ಅಪರೂಪವೇನಲ್ಲ. ಚಿಕ್ಕಂದಿನಿಂದ ತಾನು ನೋಡುತ್ತಿದ್ದ ಅಡಿಗೆ ಸಾವಿತ್ರಮ್ಮ. ಖಾಸಗಲ್ಲು ಕುಂಕುಮ, ಕತ್ತಿನಲ್ಲಿ ಕರಿಮಣಿ, ಕೈತುಂಬ ಹಸಿರು ಗಾಜಿನ ಬಳೆ, ಗಲಗಲ ಮಾಡುತ್ತಾ ಯಾವ ಅರಿಶಿಣ ಕುಂಕುಮ ಮೊರದ ಬಾಗಿನ ಮೇಲೆ ಬಿದ್ದು ಹೋಗುತ್ತಿದ್ದ ಸಾವಿತ್ರಮ್ಮ. ಅಂದು ಅರ್ಧ ರಾತ್ರಿ ಗಂಡ ಮನೆ ಬಿಟ್ಟು ಹೊರಗೆ ನಡೆದಾಗ ಆಕೆಗೆ 14 ವರ್ಷವಂತೆ. ಎಲ್ಲೆಲ್ಲೂ ಹುಡುಕಿಸಿದರಂತೆ. ಊರು, ಕೇರಿ, ಕೆರೆ, ಬಾವಿ ಎಲ್ಲಾ ಆಗಿ ಕೊನೆಗೂ ಸಿಕ್ಕಲಿಲ್ಲವಂತೆ. ಅವರ ತಾಯಿ ಅದೇ ಕೊರಗಿನಲ್ಲಿ ಹುಚ್ಚಿ ಆದರಂತೆ. ಸಾವಿತ್ರಮ್ಮ ಬೆಳೆದು ದೊಡ್ಡವರಾದಂತೆ ಅವರಿವರ ಮನೆ ಅಡಿಗೆ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಬೆಳೆದ ಗಂಡು ಮಕ್ಕಳಿದ್ದವರು ಅವರನ್ನು ಕೆಲಸಕ್ಕೆ ಕರೆಯುತ್ತಿರಲಿಲ್ಲ.

ಹಾಗೆ ಮಾಧವ. ಎಂದಿನಂತೆ ಬ್ಯಾಂಕಿಗೆ ಹೋದವನು ಮನೆಗೆ ಬಂದಿರಲಿಲ್ಲ. ಅವನಿಗೆ ಪ್ರಿಯವೆಂದು ರಾತ್ರಿ ಊಟಕ್ಕಾಗಿ ಮಾಡಿಟ್ಟಿದ್ದ ಬಿಸಿಬೇಳೆ ಹುಳಿ ಅನ್ನ ಹಾಗೆ ಒಲೆಯ ಮೇಲೆ ಆರಿ ಹಳಸಿತ್ತು. ರಾತ್ರಿ ಸರಿಯುತ್ತಿದ್ದಂತೆ ಒದ್ದಾಡುತ್ತಾ ಬರದಾಡುತ್ತಿದ್ದಾಗ ತಾನವನನ್ನು

ಮತ್ತೆ ನೋಡಲಾರೆ ಎಂದು ಸೋನಿಗೆ ಅನ್ನಿಸಿತ್ತು. ಅದು ತನ್ನ ಭ್ರಮೆ ಎಂದುಕೊಂಡಳು. ಹುಚ್ಚು ಆತಂಕ ಎಂದುಕೊಂಡಳು. ಎಲ್ಲಿ ಹೋಗಿರಬಹುದು ಎಂದು ತರ್ಕಿಸಿದಳು. ಇದೆಲ್ಲ ಒಂದು ಜೋಕ್ ಆಗಿರಲಿ ಎಂದು ಆಸೆ ಪಟ್ಟಳು. ಕಾದೆ ಕಾದಳು.

ನಂತರದ ದಿನಗಳು ಒಂದು ಭಯಂಕರ ದುಸ್ವಪ್ನದಂತೆ ಎಲ್ಲೆಲ್ಲಿ ಅಲೆದಿದ್ದು, ಎಷ್ಟು ಕಡೆ ಹುಡುಕಿಸಿದ್ದು. ಎಷ್ಟು ಮಾತು ಕೇಳಿದ್ದು.

"ಯಾರೋ ಸ್ಮಗ್ಲರ್ಸ್ ಗ್ಯಾಂಗಿನ ಅವರು ಅಪಹರಿಸಿ ಬ್ರೈನ್ ವಾಶ್ ಮಾಡಿಬಿಟ್ಟಿದ್ದರಂತೆ. ಮೊನ್ನೆ ಯಾರೋ ಡೆಲ್ಲಿಗೆ ಹೋದವರು ನೋಡಿದರಲ್ಲ ಉದ್ದ ಕೂದಲು ಬಿಟ್ಕೊಂಡು ಬೈಕಿನ ಮೇಲೆ ಓಡಾಡುತ್ತಿದ್ದಾನಂತೆ..."

"ಹರಿದ್ವಾರದಲ್ಲಿ ಸನ್ಯಾಸಿಯಾಗಿದ್ದಾನಂತೆ..."

"ಇದ್ದ ಬಂದದ್ದನ್ನೆಲ್ಲ ಉಡಾಯಿಸಿ ಏನು ಗೊತ್ತಿಲ್ಲದೆ ಮುಂಬೈ ಫುಟ್ಪಾತಿನ ಮೇಲೆ ಮಲಗ್ತಿದ್ದಾನಂತೆ..."

"ಯಾವುದೋ ಹುಡುಗಿ ಹಿಂದೆ ಬಿದ್ದು ಒದೆ ತಿಂದು ಈಗ ವಾಪಸ್ಸು ಬರಲು ಆಗದೆ ಒದ್ದಾಡ್ತಾ ಇದಾರಂತೆ.."

ಮಾಧವ ಬಂದಿರಲಿಲ್ಲ.

"ಸೋನಿ ತುಂಬಿದ ಬಸುರಿ ಹೀಗೆ ಊಟ ತಿಂಡಿ ಬಿಟ್ರೆ ಹೇಗಮ್ಮ ಎಲ್ಲಿ ಹೋಗ್ತಾನೆ ಮಾಧವ ಬಂದೇ ಬರ್ತಾನೆ".

"ಸೋನಿ ಹೊಟ್ಟೆ ಕಾಯಿಸಬೇಡಮ್ಮ... ಇಬ್ಬರಿಗೆ ಸಾಕಾಗುವಷ್ಟು ತಿನ್ನಬೇಕು. ಹೀಗಾದರೆ ಹೇಗೆ?

"ಬಸುರಿ ನಗುತ್ತಾ ಇರ್ಬೇಕಮ್ಮ ಆಗ ಮಗುವಿನ ಆರೋಗ್ಯವಾಗಿ ಚಟುವಟಿಕೆ ಆಗಿರುತ್ತೆ"

"ಒಂದೇ ಮೂಲೇಲಿ ದಿನವೆಲ್ಲ ಕೊಡಬೇಡ ಹಾಗೆ.... ಮೊದಲೇ ಚೊಚ್ಚಲು ಹೆರಿಗೆ ಕಷ್ಟವಾಗುತ್ತೆ ಬಾ ತಿರುಗಾಡಿ ಬರೋಣ ಬಾ ಸೋನಿ"

ಹೇಗೆ ಇದಕ್ಕೆಲ್ಲ ಕಣ್ಮುಚ್ಚಿ ಬಿಡುವುದು? ಯಾವುದೋ ಕತ್ತಲೆ ಕೋಣೆಯಲ್ಲಿ ನೀರಿಲ್ಲದೆ ಚಿತ್ರಹಿಂಸೆ ಕೊಟ್ಟ ಆತಂಕವಾದಿಗಳ ಕಥೆಗಳು. ಹಿಂದಿನದನ್ನೆಲ್ಲ ಮರೆಸಿ ಗೂಢಚಾರನ್ನಾಗಿಸಿದ ಕಥೆಗಳು. ಇದ್ದಕ್ಕಿದ್ದಂತೆ ಪೂರ್ವ ಜನ್ಮದ ನೆನಪು ಬಂದು ಹಿಮಾಲಯದ ತಪ್ಪಲಿಗೆ ಓಡಿ ಹೋದವರ ಕಥೆಗಳು. ಯಾರನ್ನೂ ಬಿಡಿಸ ಹೋಗಿ ತಾವೇ ಬಲಿಯಾದವರ ಕಥೆಗಳು. ಒಂದು ಮೂತ್ರಪಿಂಡಕ್ಕಾಗಿ ಬೀದಿ ಹೆಣವಾದವರ ಕಥೆಗಳು.

ಬೆನ್ನ ಮೇಲೆ ಬಾಸುಂಡೆಗಳು, ಗಡ್ಡ ತುಂಬಿದ ಮುಖಗಳು, ನಿರ್ಜೀವ ಕಣ್ಣುಗಳು, ಕತ್ತರಿಸಿದ ಕೈಗಳು, ಹಗ್ಗದಿಂದ ತೂಗುವ ದೇಹಗಳು. ಪೇಪರ್ ನಲ್ಲಿ ಬರಿಯ ಹೆಸರುಗಳು.

ಅಲೆದಲೆದು ಕಂಗೆಟ್ಟು ಅಂದು ಎಷ್ಟನೇ ಸಲ ಯಾರು ಗುರುತಿಸದ ಶವ ನೋಡಲು ಶವಗಾರಕ್ಕೆ ಹೋದಾಗ ಅವರು ಬಿಳಿ ಬಟ್ಟೆ ಸರಿಸುವ ಮುಂಚೆ ಕ್ಷಣ "ಅವನೇ ಆಗಿಬಿಟ್ಟಿದ್ದರೆ ವಾಸಿ" ಅನ್ನಿಸಿದಾಗ ಸೋನಿ ಬೆವರಿದ್ದಳು.

ನಿಧಾನವಾಗಿ ಎಲ್ಲಾ ಸ್ತಬ್ಧವಾಗಿತ್ತು. ಮನಸ್ಸಿನಲ್ಲಿ ವಿಚಿತ್ರ ಮೌನ. ಹಾಗೆ ದಿನನಿತ್ಯದ ಬದುಕಿಗೆ ಹೆಚ್ಚು ಕ್ರಮ. ಅಕ್ಕಪಕ್ಕದವರೊಂದಿಗೆ ಜೋರಾಗಿ ಮಾತುಕತೆ, ಮನೆಯ ಬಾಗಿಲಿಗೆ ಹೊಸ ಪರದೆಗಳು. ಪ್ರತಿ ರಾತ್ರಿ ಪ್ರೀತಿಗೆ ಹೊಸ ಕಥೆ. ಎಲ್ಲಾ ಮರೆತುಬಿಡಬೇಕು, ಇನ್ನು ನನ್ನ ಬದುಕಿಗೆ ಹೊಸ ಮಗ್ಗಲು ಎಂದು ಹೇಳಿಕೊಳ್ಳುವ ಪ್ರಯತ್ನ.

ಸಾಗರ್ ಲಾಡ್ಜ್ ಇಂದ ನಡೆದು ಹೋದರೆ 5 ನಿಮಿಷ ದೇವ್ಕ ಬೀಚಿಗೆ. ಹೆಚ್ಚು ಆವೇಶವಿಲ್ಲದ ಸಮುದ್ರ. ನೀರಂಚಿನಲ್ಲಿ ಉದ್ದಕ್ಕೂ ಕಪ್ಪು ಕಲ್ಲು ಬಂಡೆಗಳು. ಮರಳ ಮೇಲೆ ಮುಗ್ಗರಿಸದೆ ನಡೆಯುವುದು ಕಷ್ಟವೆನಿಸುವಂತೆ ಬಂಡೆಗಳತ್ತ ಆಗಸದವರೆಗೂ ಚಾಚಿದ್ದ ನೀರು. ಇತ್ತ ಮರಳ ಮೇಲೆ ದೊಡ್ಡ ಪಾರ್ಕು. ಮೇರಿ- ಗೋ- ರೌಂಡ್ ಜಾರೋ ಬಂಡೆ, ತೂಗುಯ್ಯಾಲೆ, ಬಲೂನು ಚನಾ, ಕುಲ್ಫಿ ಮಾಡುವವರ ಕೂಗು. ಮಕ್ಕಳ ಗಲಾಟೆ. ಮರಳ ಮೇಲೆ ದರ್ರಿ ಹಾಸಿ ಕುಳಿತ ತಂದೆ ತಾಯಿ. ಕೂತ ನಿಂತ ಓಡಾಡುವ ಜನ ಎಲ್ಲೆಲ್ಲೂ. ಇಲ್ಲೇ ಅಲ್ಲವೇ ಅವರಿಗೆ ಮಾಧವನನ್ನು ಕಂಡಂತೆನಿಸಿದ್ದು. ಸೋನಿ ಪಾರ್ಕ್ ಸುತ್ತು ಹಾಕಿದಳು ಎಲ್ಲರ ಮುಖ ಗಮನಿಸುತ್ತಾ. ಕೊನೆಗೆ ಆಯಾಸವಾಗಿ ಹಾಗೆ ಮರಳ ಮೇಲೆ ಕೂತು ಕಾಲು ಚಾಚಿದಳು. ಸೂರ್ಯಸ್ತದ ಮಬ್ಬು ಕವಿಯ ತೊಡಗಿತು. ಇದುವರೆಗೂ ಸ್ನೇಹ ಮೈಯಾಗಿದ್ದ ಕೊಡಲು ವಿಚಿತ್ರ ಗೂಢತೆ ಹೊದ್ದುಕೊಂಡು ಭೀತಿ ಹುಟ್ಟಿಸತೊಡಗಿತ್ತು. ಪಾರ್ಕಿನಲ್ಲಿ ಹಾಕಿದ್ದ ಮೊದಲು ಪೇಲವವಾಗಿದ್ದ ದೀಪಗಳು. ಈಗ ಹೆಚ್ಚು ತೇಜವಾಗಿ ಉರಿಯುತ್ತಿದ್ದವು. ಮಲ್ಲಗೆ ಅಲ್ಲಿಂದ ಎದ್ದು ಸಮುದ್ರದಂಚಿನಲ್ಲಿ ನಡೆಯತೊಡಗಿದಳು ಸೋನಿ. ಏನು ಮಾಡುತ್ತಿದ್ದೇನೆ ಯೋಚಿಸುತ್ತಲೇ ನಡೆಯುತ್ತಲೇ ಹೋದಳು. ಇದ್ದಕ್ಕಿದ್ದಂತೆ ಎದುರು ಬಂಡೆಯ ಮೇಲೆ ಕಂಡ ವ್ಯಕ್ತಿಯಿಂದ ಬೆಚ್ಚಿದಳು.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.....

# ವಿಜ್ಞಾನಿ ಎಂ. ಎಸ್. ಸ್ವಾಮಿನಾಥನ್

✎ ವನಜಾ ರಾಜನ್

ಹಸಿರು ಕ್ರಾಂತಿಯ ಜನಕ 1987 ರಲ್ಲಿ ಮೊಟ್ಟ ಮೊದಲನೆಯ "ಆಹಾರ ಬಹುಮಾನ" ವಿಶ್ವದ ಪ್ರಪ್ರಥಮ ಪಾರಿತೋಷಕವನ್ನು ಪಡೆದ ವಿಜ್ಞಾನಿ ಕೋಟ್ಯಾಂತರ ಜನ ಹಸಿವಿನಿಂದ ಕಂಗಾಲಾಗಿ ಸಾಯುತ್ತಿದ್ದ ಜನರಿಗೆ ಮರುಜೀವನ ನೀಡಿದ ಹಿರಿಯ ಜೀವ, ವಿಜ್ಞಾನಿ ಎಂ. ಎಸ್. ಸ್ವಾಮಿನಾಥನ್ ರವರಿಗೆ ನಮ್ಮ ಶ್ರದ್ಧಾಪೂರ್ವಕ ನಮನಗಳು!




ಈ ವಿಜ್ಞಾನಿ "ಔಷಧವೈದ್ಯ" (Doctor) ನಾಗಿ ತಮ್ಮ ಓದನ್ನು ಪ್ರಾರಂಭಿಸಿದರು. ಆ ಕಾಲ ಬ್ರಿಟಿಷರು, ನಮ್ಮ ದೇಶವನ್ನು ಬಿಟ್ಟು ಹೋಗುವಾಗ (ಸುಮ್ಮನೆ ಹೋಗಲಿಲ್ಲ) ಬೆಂಗಾಳಿನಲ್ಲಿ (೧೯೪೩) ಭೀಕರ ಕ್ಷಾಮ ವನ್ನು ಸೃಷ್ಟಿ ಮಾಡಿ ಹೋದರು. ದುರ್ಭಿಕ್ಷ ಕಾಲ, ನೀರು ಆಹಾರವಿಲ್ಲದೆ ಹಸಿವಿನಿಂದ ಜನಗಳು, ಸಾಯುತ್ತಿರುವುದನ್ನು ಕಣ್ಣಾರೆ ಕಂಡು ಇದಕ್ಕೆ ಕೂಡಲೇ ಪರಿಹಾರವನ್ನು ಹುಡುಕಲೇಬೇಕೆಂದು, ಕೃಷಿ ವಿಜ್ಞಾನವನ್ನು ಆರಿಸಿಕೊಂಡರು. ಓದು ಮುಂದುವರಿಸಿದರು. ಸಾಲು-ಸಾಲಾಗಿ ವಿಜ್ಞಾನದಲ್ಲಿ ಪಾಂಡಿತ್ಯ ಪದವಿಗಳನ್ನು ಗಳಿಸಿಕೊಂಡರು. ಅಂದಿನ ದಿನಗಳು ನಮ್ಮ ಭಾರತವನ್ನು "ಭಿಕ್ಷಾಪಾತ್ರೆ" (Begging Bowl) ಎಂಬುದಾಗಿ ವಿಶ್ವದಲ್ಲೆಲ್ಲಾ ಹೀಯಾಳಿಸಿ ಮಾತನಾಡಿ ನೊಂದ ಜೀವಿಗಳ ಗಾಯದ ಮೇಲೆ ಬರೆ ಹಾಕುತ್ತಿದ್ದರು.

ಈ ದಯಾಮಯಿ ವಿಜ್ಞಾನಿ ಐ.ಪಿ.ಎಸ್ ಗೆ ಸೇರಲು ನಿರಾಕರಿಸಿದ್ದರು (1949) ಬದಲಾಗಿ 'ನೆದರ್ ಲ್ಯಾಂಡ್ಸ್' ನಲ್ಲಿ 'ಜೆನೆಟಿಕ್ಸ್' ಹಾಗೂ 'ಡಾಕ್ಟರೇಟ್ ಫಿಲಾಸಫಿ' ಕೇಂಬ್ರಿಡ್ಜ್ ನಲ್ಲಿ ಪಡೆದು, ನಂತರ ಓದು ಮುಂದುವರೆಸಲು ಹಾಗೂ ಸಂಶೋಧನೆ (Research) ವಿಸ್ಕೋಸಿನ್ (Wiscosin) ಗೆ ತೆರಳಿದರು. ಅಲ್ಲಿ ಅವರು ಚಾರಿತ್ರಿಕ (legendary) ಡಾ| ನಾರ್ಮನ್ ಬೋರ್ ಲೌಗ್ ರವರನ್ನು ಭೇಟಿ ಮಾಡುವ ಸದಾವಕಾಶ ಲಭಿಸಿತು. ಪರಿಚಯವಾಯಿತು. ಅಂದಿನಿಂದ (1953) ಬೆಂಗಾಳಿನ ಸ್ಥಿತಿ ಗತಿಯೇ ಬದಲಾಯಿತು. ರೈತರ ಕಷ್ಟ ನಿವಾರಣೆಗೆ ಬೆಳಕಿನ ದಾರಿ ಕಂಡಂತಾಯಿತು. ರಸ್ಟ ಕಾಯಿಲೆ ಗೋಧಿಯಲ್ಲಿ ಬರದಂತೆ ತಡೆಗಟ್ಟುವುದು ಹೇಗೆ ಎಂಬ ವಿಷಯದ ಬಗ್ಗೆ ಮಾತನಾಡಿದರು. ಈ ಮುಂಚೆ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿ ಕೇವಲ 20% ರಿಂದ 30% ರವರೆಗೆ ಮಾತ್ರ ಬೆಳೆ ತೆಗೆಯುತ್ತಿದ್ದರು.

ಅದಷ್ಟೇ ಅಲ್ಲದೆ ಅವುಗಳ ತೆಳ್ಳನೆಯ ಕಾಂಡ (Stem) ಬೀಜಗಳ ಭಾರ ತಡೆಯಲು ಅಸಮರ್ಥವಾಗಿತ್ತು. ಅಧಿಕವಾಗಿ 'ಗೋಧಿ' ಬೆಳೆಯುತ್ತಿದ್ದ ಮೆಕ್ಸಿಕೊ ಕಾಂಡವನ್ನು ತೆಳ್ಳಗೆ ಕುಳ್ಳವಾಗಿರುವ ಜೀವಾಣು (Dwarfing Gene) ಸೇರಿಸಿ, ಬೆರಸಿ ಅಧಿಕ ಬೆಳೆ ಬೆಳೆಯುತ್ತಿದ್ದರು. ಇದನ್ನು ಜಪಾನ್ ನಿಂದ ತರಿಸುತ್ತಿದ್ದರು. ಪ್ರಧಾನಮಂತ್ರಿ ಶ್ರೀ. ಲಾಲ್ ಬಹಾದ್ದೂರ್ ಶಾಸ್ತ್ರಿ ಹಾಗೂ ಕೃಷಿಮಂತ್ರಿ ಶ್ರೀ ಸುಬ್ರಮಣ್ಯಂ ಅವರುಗಳ ಮಾರ್ಗದರ್ಶನದಲ್ಲಿ ಡಾ| ಬೋರ್ ಲವ್ ಭಾರತಕ್ಕೆ ಭೇಟಿ ಕೊಟ್ಟ ನಂತರ 100 kg ಬೀಜಗಳನ್ನು ಕಳುಹಿಸಿ ಕೊಟ್ಟರು. ಅದ್ಭುತವಾಯಿತು! ಭಾರತೀಯ ವಿಜ್ಞಾನಿಗಳು ಕೆಂಪು ಬಣ್ಣದ ಬೀಜಗಳನ್ನು ಬೆರಸಿದ ಮೇಲೆ 'ಗೋಧಿ ಹೊನ್ನಾಯಿತು' 1956 ರ ವೇಳೆಗೆ ಬರಗಾಲ ಕೊನೆಗೊಂಡಿತು. ಹಸಿವು ನೀಗಿತು! ಶ್ರೀಯುತ ಎಂ. ಎಸ್. ಸ್ವಾಮಿನಾಥನ್ ರವರು ರೈತರ ಬೆಂಗಾವಲಿಗೆ ನಿಂತರು. "ಅನ್ನದಾತ ಸುಖೀಭವ" ಎಂಬ ಸನ್ನುಡಿ ಇದೆ. ಅನ್ನ ನೀರು ಜೀವನಕ್ಕೆ ಎಷ್ಟು ಮುಖ್ಯವೆಂದರಿತಿದ್ದರು ಆ ಹಿರಿಜೀವ. ಕವರು ತಮ್ಮ ಜೀವನದುದ್ದಕ್ಕೂ ಮಾಡಿದ ಸತ್ಕಾರ್ಯಗಳನ್ನು ಮರೆಯಲು ಸಾಧ್ಯವೇ?

(ಸಂಗ್ರಹ)

## <u>ತಲೆ ಕೂದಲು ಉದುರುವಿಕೆಯನ್ನು ತಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು?</u>

ಒಂದು ಕೂದಲಿನ ಸರಾಸರಿ ಆಯುಷ್ಯ ಎರಡು ವರ್ಷಗಳು. ಆಯುಷ್ಯ ಮುಗಿದ ಕೂದಲುಗಳು ಉದುರಿ ಅದೇ ಜಾಗದಲ್ಲಿ ಹೊಸ ಕೂದಲುಗಳು ಬೆಳೆಯುತ್ತವೆ. ಆದಕಾರಣ ಕೂದಲು ಉದುರುವುದೇ ವ್ಯಾಧಿ ಎಂದು ಭಾವಿಸಬೇಡಿ. ಉದುರಿದ ಜಾಗದಲ್ಲಿ ಹೊಸ ಕೂದಲು ಬೆಳೆಯದೆ ಇದ್ದರೆ ಅದು ವ್ಯಾದಿಯ ಲಕ್ಷಣ.

1. ಚಹಾಚರಟವನ್ನು ಕಸದ ತೊಟ್ಟಿಗೆ ಚೆಲ್ಲುವ ಬದಲು ಅದರಲ್ಲಿ ನಿತ್ಯ ತಲೆಯನ್ನು ತೊಳೆಯಿರಿ ಇದರಿಂದ ಕೂದಲು ಕಪ್ಪು ಬಣ್ಣಕ್ಕೆ ತಿರುಗುತ್ತದೆ.

2. ಒಂದು ಚಮಚ ಎಳ್ಳೆಣ್ಣೆಯ ಜೊತೆಗೆ ಒಂದು ಚಮಚ ಜೇನುತುಪ್ಪ ನಿತ್ಯ ಬೆಳಗ್ಗೆ ಬರಿಯ ಹೊಟ್ಟೆಗೆ ಸೇವಿಸಿ ಹಾಗೆಯೇ ಸಾಯಂಕಾಲವೂ ಸಹ

3. 3 ಗ್ರಾಂ ಕರಿಮೆಣಸನ್ನು ಹಾಲಿನಲ್ಲಿ ಅರೆದು ತಲೆಗೆ ಚೆನ್ನಾಗಿ ತಿಕ್ಕಿ, ಒಂದು ಗಂಟೆ ಬಿಟ್ಟು ಸ್ನಾನ ಮಾಡಿ ಸ್ವಲ್ಪ ಉರಿಯುತ್ತದೆ ಸಹಿಸಿಕೊಳ್ಳಿ.

4. ಕೊತ್ತಂಬರಿ ಸೊಪ್ಪನ್ನು ಅರೆದು ನಿತ್ಯ ತಲೆಗೆ ಲೇಪಿಸಿ.

ಇಷ್ಟು ಚಿಕಿತ್ಸೆಯಲ್ಲಿ ಯಾವುದಾದರೂ ಒಂದನ್ನು ಮಾತ್ರ ಉಪಯೋಗಿಸಿ.

# ಕನ್ನಡಿಗರು ಕೃತಜ್ಞತೆಯಿಂದ ನೆನೆಯುವ ಕಾಯಕ
# ಒಂದು ವಿನೂತನ ಉದ್ಗ್ರಂಥ



✍ ಡಾ. ಜಿ. ಎನ್. ಉಪಾಧ್ಯ

**ಮಹಾತ್ಮರ ಚರಿತಾಮೃತ**

(216 ವಿಶ್ವವಿಭೂತಿಗಳ ಜೀವನ ಕಥನ!)

ಪ್ರಭು ಚನ್ನಬಸವ ಸ್ವಾಮೀಜಿ (ಅಥಣೀಶ)

ಶ್ರೀ ಗುರುಚನ್ನಬಸವೇಶ್ವರ ಗ್ರಂಥಮಾಲೆ

ಶ್ರೀ ಮೋಟಗಿ ಮಠ, ಅಥಣಿ,

ಪುಟಗಳು: 1088

ಬೆಲೆ: ರೂ. 2000/–

'ಮಹಾತ್ಮರ ಚರಿತಾಮೃತ' ಇದು ಪ್ರಭು ಚನ್ನಬಸವ ಸ್ವಾಮೀಜಿ ಅವರ ವಿನೂತನ ಕೃತಿ. 216 ವಿಶ್ವವಿಭೂತಿಗಳ ಸಂಕ್ಷಿಪ್ತ ಜೀವನಕಥನ ಈ ಉದ್ಗ್ರಂಥದಲ್ಲಿ ಅತ್ಯಂತ ಸೊಗಸಾಗಿ ಪಡಿಮೂಡಿದೆ. ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯ, ಅನುಭಾವ, ಕಲೆ, ವಿಜ್ಞಾನ, ಸಂಗೀತ, ಇತಿಹಾಸ ಇತ್ಯಾದಿ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಮಹಾನುಭಾವರ ಜೀವನವುಳ್ಳ ಮೇರು ಕೃತಿ ಇದಾಗಿದೆ. ಸಾಸಿವೆಯ ಕಾಳಿನಲ್ಲಿ ಸರ್ವಸ್ವವನ್ನು ಚಿತ್ರಿಸುವ ಸಾಹಸವನ್ನು ಪ್ರಭು ಚನ್ನಬಸವ ಸ್ವಾಮೀಜಿ ಅವರು ಈ ಕೃತಿಯಲ್ಲಿ ಮಾಡಿರುವುದು ಉಲ್ಲೇಖನೀಯ ಅಂಶ. ಜಗದಗಲದ ವಿವಿಧ ರಂಗಗಳ ಮಹಾನ್ ಸಾಧಕರ ಸಾಧನೆ ಹಾಗೂ ಅವರ ಆದರ್ಶಗಳನ್ನು ಎತ್ತಿತೋರಿಸುವುದೇ ಈ ಕೃತಿಯ ಮೂಲ ಉದ್ದೇಶವಾಗಿದೆ.

ಪ್ರಸ್ತುತ ಕೃತಿ ಒಂದು ಸುಜ್ಞಾನ ಸಾಗರದಂತಿದೆ. ಇಲ್ಲಿ ಜಗದಗಲದ ಸಾಧು ಸಂತರು, ಶರಣರು, ದಾಸರು, ದಾರ್ಶನಿಕರು, ಮಹಾಂತರು, ಮಹಾತ್ಮರು, ಮಹರ್ಷಿಗಳು, ಕಲಿಗಳು, ಕೋವಿದರು, ಚಿಂತಕರು, ಲೇಖಕರು, ಮಹಾನುಭಾವರು, ಆಚಾರ್ಯರು, ಸಮಾಜಸುಧಾರಕರು ಮೊದಲಾದವರ ಯಶೋಗಾಥೆ ಮನಂಬುಗುವಂತೆ ದಾಖಲಾಗಿದೆ. ಈ ಎಲ್ಲ ಮಹನೀಯರ ಜೀವನ ಸಾಧನೆಗಳನ್ನು ಓದುವುದರಿಂದ ಸಹೃದಯರ ಮನೋವಿಕಾಸವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ವ್ಯಕ್ತಿತ್ವ ವಿಕಸನ ಕ್ಷೇತ್ರಕ್ಕೆ ಇದೊಂದು ಮೌಲಿಕ ಆಕರ ಗ್ರಂಥವೂ ಆಗಿದೆ. ಈ ಕೃತಿ ಒಂದು ಅದ್ಭುತ ಅಚ್ಚರಿ ಎಂದರೂ ಉತ್ಪ್ರೇಕ್ಷೆಯಾಗದು. ಪ್ರಪಂಚದ ಹತ್ತು ಹಲವು ಸುಪ್ರಸಿದ್ಧ ದೈತ್ಯ ಸಾಧಕರ ಜೊತೆ ಜೊತೆಗೆ ನಮ್ಮಲ್ಲೇ ಇದು ಅಪೂರ್ವ ಸಾಧನೆಗೈದೂ ಉಪೇಕ್ಷೆಗೆ ಒಳಗಾದ ಮಹಾನ್ ಪ್ರತಿಭೆಗಳ ಜೀವನ ವೃತ್ತಾಂತ ಇಲ್ಲಿ ದಾಖಲಾಗಿರುವುದು ವರ್ತಮಾನದ ತುರ್ತೇ ಆಗಿದೆ. ವಿದ್ಯಾರ್ಥಿಗಳಿಂದ ತೊಡಗಿ ಎಲ್ಲ ವಯೋಮಾನದವರು ಓದಿ ಜ್ಞಾನ ಸಂಪಾದನೆ ಮಾಡಿಕೊಳ್ಳಬಹುದಾದ ವಿಶ್ವಕೋಶದಂತೆ ಕಂಗೊಳಿಸುತ್ತಿರುವುದು ಈ ಗ್ರಂಥದ ಇನ್ನೊಂದು ವಿಶೇಷ. ಈ ಅಸಾಮಾನ್ಯ ಕಾರ್ಯವನ್ನು ಬಹಳ ಕಾಳಜಿಯಿಂದ ಯಾವುದೇ ಪೂರ್ವಾಗ್ರಹಗಳಿಲ್ಲದೆ ಸಮಚಿತ್ತದಿಂದ ಆಗು ಮಾಡಿದ ಸ್ವಾಮೀಜಿ ಅವರ ಶ್ರಮ, ಸಾಧನೆಗಳಿಗೆ ಕನ್ನಡಿಗರು ಕೃತಜ್ಞರಾಗಿರಬೇಕು. ತಮ್ಮ ಸಾರ್ಥಕ ಬದುಕಿನ ಮೂಲಕ ತಮ್ಮ ಸುತ್ತಮುತ್ತ ಒಂದು ಪ್ರಭಾವಳಿಯನ್ನು ರೂಪಿಸಿದ ಸಾಧಕರ ಬದುಕನ್ನು ಈ ಕೃತಿಯಲ್ಲಿ ನಮ್ಮ ಮುಂದೆ ತೆರೆದಿಡಲಾಗಿದೆ.

ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ' ಒಂದು ಅಮರ ಕಾವ್ಯ ಕೃತಿ. ಅಲ್ಲಿನ ಒಂದು ಪದ್ಯ ಅನೇಕ ದೃಷ್ಟಿಯಿಂದ ಮಹತ್ವದ್ದಾಗಿದೆ.

ಒಮ್ಮೆ ಹೂದೋಟದಲಿ
ಒಮ್ಮೆ ಕೆಳೆಕೂಟದಲಿ
ಒಮ್ಮೆ ಸಂಗೀತದಲಿ
ಒಮ್ಮೆ ಶಾಸ್ತ್ರದಲಿ
ಒಮ್ಮೆ ಸಂಸಾರದಲಿ
ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗೋ ಮಂಕುತಿಮ್ಮ

ಎಂಬ ಆಶಯ ವ್ಯಕ್ತವಾಗಿದೆ. ಅಥಣಿಯ ಶ್ರೀ ಮೋಟಗಿಮಠದ ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ ವಿರಚಿತ 'ಮಹಾತ್ಮರ ಚರಿತಾಮೃತ' ಕೃತಿ ಸಹ ಉಜ್ವಲ ದೀಪಸ್ತಂಭಗಳನ್ನು ಅನಾವರಣಗೊಳಿಸಿ ಲೋಕಮುಖಕ್ಕೆ ಪರಿಚಯಿಸಿದೆ.

ಇಲ್ಲಿನ ಬರವಣಿಗೆಯಲ್ಲಿ ಸಮಾಜ, ಸಾಹಿತ್ಯ, ಸಂಸ್ಕೃತಿ, ಜೀವನ, ರಾಜನೀತಿ ಹೀಗೆ ಹತ್ತು ಹಲವು ವಿಷಯಗಳನ್ನು ಹಾಯುವ ಶ್ರೀಗಳ ವಿಚಾರಸರಣಿಯಲ್ಲಿ ಎಲ್ಲರಿಗೂ ಶ್ರೇಯಸ್ಕರವಾದ ದೂರದೃಷ್ಟಿಯುಳ್ಳ ಗುಣಗಳು ಸೇರ್ಪಡೆಗೊಂಡಿವೆ. ಮನುಷ್ಯ ಜನ್ಮ ಅಪೂರ್ವವಾದುದು. ಪ್ರತಿಯೊಬ್ಬರಲ್ಲೂ ಒಂದು ವಿಶೇಷವಾದ ಮಹಾ ಘನ ಅಡಗಿರುತ್ತದೆ. ವ್ಯಕ್ತಿಗೆ ಏಕಮುಖ, ವ್ಯಕ್ತಿತ್ವಕ್ಕೆ ನೂರಾರು ಮುಖಗಳು. ಭೂತಿ ಎಂದರೆ ಸಾಧಾರಣ ಇರುವಿಕೆ, ವಿಭೂತಿ ಎಂದರೆ ವಿಶೇಷವಾದ ರೂಪ ಮೈದಾಳುವುದು. ವ್ಯಕ್ತಿ ಮಹಾನ್ ಶಕ್ತಿಯಾಗಿ ಪರಿಣಮಿಸಿದಾಗ ಬಾಳು ನಿಜವಾದ ಅರ್ಥದಲ್ಲಿ ಬಂಗಾರವಾಗುತ್ತದೆ. ನಾವು ಬದುಕನ್ನು ಸಾಧನೆಯ ಸೋಪಾನವಾಗಿಸಿಕೊಳ್ಳಬೇಕೆಂಬ ಆಶಯ ಇಲ್ಲಿ ಢಾಳಾಗಿ ಬಿಂಬಿತವಾಗಿದೆ.

ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು, ಹಸನುಗೊಳಿಸಿಕೊಳ್ಳಬೇಕೆನ್ನುವ ಪ್ರತಿಯೊಬ್ಬರೂ ಓದಬೇಕಾದ, ಬಾಳ್ವೆಗೆ ಬೆಳಕಾಗಬಲ್ಲ ಅಪೂರ್ವ ಕೃತಿ 'ಮಹಾತ್ಮರ ಚರಿತಾಮೃತ'. ಕನ್ನಡ ಸಹೃದಯರ ಜ್ಞಾನ ವೃದ್ಧಿಯಾಗಲು ಬದುಕು ನೇರ್ಪಗೊಳ್ಳಲು ಈ ಕೃತಿ ಕೈದೀವಿಗೆಯಂತಿದೆ. ವರ್ತಮಾನದ ಸಮಾಜಕ್ಕೆ ಅಗತ್ಯವಾದುದನ್ನು ನೀಡುವುದು ಲೇಖಕರ ಕರ್ತವ್ಯವೂ ಹೌದು. ಕನ್ನಡದಲ್ಲಿ ವಿಶ್ವಕೋಶಗಳಿಲ್ಲದ ದಿನಗಳಲ್ಲಿ ಶಿವರಾಮ ಕಾರಂತರು ಏಕಾಂಗಿಯಾಗಿ ಬಾಲಪ್ರಪಂಚದ ಮೂರು ಸಂಪುಟಗಳನ್ನು ಹೊರತಂದರು. ಡಿ.ವಿ.ಜಿ. ಅವರ ಜ್ಞಾಪಕ ಚಿತ್ರ ಶಾಲೆ ಕೃತಿ ಮನುಷ್ಯ ಸ್ವಭಾವದ ಸಮಸ್ತ ವೈವಿಧ್ಯಗಳನ್ನೂ ಸೆರೆಹಿಡಿದ ಯಶಸ್ವೀ ಕೃತಿ. ಪ್ರಸಕ್ತ ಪ್ರಭು ಚನ್ನಬಸವ ಸ್ವಾಮೀಜಿ ಅವರ ಕೃತಿ ಸಹ ವರ್ತಮಾನದ ತುರ್ತೇ ಆಗಿದೆ.

- ಈ ಜೀವ, ಜಗತ್ತು ಹಾಗೂ ಪರಾತ್ಪರ ತತ್ವ ಈ ಮೂರರ ಸಂಬಂಧವನ್ನು ಕುರಿತು ಗಾಢವಾಗಿ ಜಿಜ್ಞಾಸೆಗೆ ತೊಡಗಿಸಿಕೊಂಡ ಅನುಭಾವಿಗಳ, ಸಾಧಕರ ಸುವಿಚಾರಗಳ ಧಾರೆ ಇಲ್ಲಿ ಹೊನಲಾಗಿ ಹರಿದಿರುವುದು ಪ್ರಸ್ತುತ ಕೃತಿಯ ಧನಾತ್ಮಕ ಅಂಶ.
- ಸಾಂಪ್ರತ ಕೃತಿಯಲ್ಲಿ ಚಿತ್ರಣಗೊಂಡಿರುವ ನಿರೂಪಿತವಾಗಿರುವ ಸಾಧಕರು ವಿಭಿನ್ನ ಮತ, ಧರ್ಮ, ದೇಶ, ಕಾಲಗಳಿಗೆ ಸಂಬಂಧಿಸಿದವರಾದರೂ ಅವರೆಲ್ಲರು ಒಕ್ಕೊರಳಿನಿಂದ ಪ್ರತಿಪಾದಿಸಿದ್ದು ಮಾನವ್ಯ ಧೋರಣೆ. ಹೀಗಾಗಿ ಹೊಸತಿಗೆ ಜೀಕಲು ಬೇಕಾದ ಸಾರ್ವಕಾಲಿಕ ಚಿಂತನೆ, ಜಿಜ್ಞಾಸೆ ಈ ಕೃತಿಯ ಪುಟ ಪುಟಗಳಲ್ಲಿ ಪಡಿಮೂಡಿರುವುದು ವಿಶೇಷ. ಜಗತ್ತಿನ ಕಷ್ಟ ಕಾರ್ಪಣ್ಯಗಳಿಗೆ ಮಿಡಿದ ಮಹಾಚೇತನಗಳ ಬಿಸಿಯುಸಿರು ಇಲ್ಲಿ ಹಬೆಯಾಡುತ್ತಿದೆ.
- ನಾವು ಬದುಕಿನಲ್ಲಿ ಅರಿತುಕೊಳ್ಳಬೇಕಾದ, ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕಾದ ಹಾಗೂ ಯಥಾ ಸಾಧ್ಯ ಅಳವಡಿಸಿಕೊಳ್ಳಬೇಕಾದ ವಿಚಾರಧಾರೆ ಈ ಉದ್ಗ್ರಂಥದಲ್ಲಿ ಹರಳುಗಟ್ಟಿರುವುದು ವಿಶೇಷ. ಕನ್ನಡಿಗರು, ಕನ್ನಡ ಮನಸ್ಸುಗಳು ಕಂಡುಕೊಳ್ಳಬೇಕಾದ ಬದುಕಿನ ದಾರಿಯನ್ನು ಇಲ್ಲಿ ತೆರೆದು ತೋರಲಾಗಿದೆ.
- ಬದುಕು ಹಸನಾಗಬೇಕು, ಬದುಕು, ಬದುಕಗೊಡು ಎಂಬ ಉದಾತ್ತ ಮಾನವೀಯ ದೃಷ್ಟಿಕೋನವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಅಂತರಂಗ ಬಹಿರಂಗಗಳು ಒಂದಾಗಿ ಪ್ರತಿಯೊಬ್ಬ ವ್ಯಕ್ತಿಯೂ ಮಾಗಿ ನಿರಾಲಂಬನಾಗಬೇಕು. ನಿಜವಾದ ಅರ್ಥದಲ್ಲಿ ಮನುಷ್ಯ ಸ್ವತಂತ್ರನಾಗಬೇಕು ಎಂಬ ಹೆಬ್ಬಯಕೆ ಈ ಕೃತಿಯಲ್ಲಿ ಢಾಳಾಗಿ ಕಾಣಸಿಗುತ್ತದೆ. 'ನೋಡುವುದ ನೋಡಲರಿಯದೆ ಕೆಟ್ಟಿತ್ತು ಈ ಜಗವೆಲ್ಲ' ಎಂಬ ಅಲ್ಲಮನ ಮಾತನ್ನು ಈ ಕೃತಿ ನೆನಪಿಗೆ ತರುತ್ತದೆ. ವಿವೇಕ ಅರಳಿ ನಮ್ಮನ್ನೇ ನಾವು ನೋಡಿಕೊಳ್ಳಲು ಈ ಕೃತಿ ನಮ್ಮ ನೆರವಿಗೆ ಬರುತ್ತದೆ.

ಕರಿಯನ್ನು ಕನ್ನಡಿಯಲ್ಲಿ, ಸಿಂಧುವನ್ನು ಬಿಂದುವಿನಲ್ಲಿ ಹಿಡಿದಿಡುವ ತೆರನಾದ ಘನ ಪ್ರಯತ್ನ ಇಲ್ಲಿ ಯಶಸ್ವಿಯಾಗಿ ನೆರವೇರಿದೆ. ಸ್ವಾಮೀಜಿ ಅವರ ಪ್ರತಿಭೆ, ಪ್ರೌಢ ಚಿಂತನೆ ಹಾಗೂ ವ್ಯಾಪಕ ಓದು ಅಧ್ಯಯನದ ಫಲವಾಗಿ ಈ ಬೃಹತ್ ಕೃತಿ ಮೂಡಿಬಂದಿದೆ. ಕುವೆಂಪು ಅವರು ಹೇಳಿದಂತೆ 'ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಲೇ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡಬೇಕು' ಎಂಬ ಉದಾತ್ತ ದೃಷ್ಟಿಕೋನ ಈ ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಕನ್ನಡವೂ ಸೇರಿದಂತೆ ಭಾರತೀಯ ಸಂಸ್ಕೃತಿಯ ಭೂಮದರ್ಶನ ಈ ಕೃತಿಯಲ್ಲಿ ನಮಗೆ ಕಾಣಸಿಗುತ್ತದೆ. ಇಂಥ ಅಭೂತಪೂರ್ವ ಕೃತಿಯನ್ನು ರಚಿಸಿದ ಪ್ರಭು ಚನ್ನಬಸವ ಸ್ವಾಮೀಜಿಯವರಿಗೆ ಕನ್ನಡಿಗರು ಕೃತಜ್ಞರಾಗಿರಬೇಕು. ಇದೊಂದು ಭವನದ ಭಾಗ್ಯವೇ ಸರಿ!

# Few more strides before the centenary



✍ M.A.N. Prasad

**Association gets a specially sculpted Ganapati**

Sports have been a major activity in the Association. Indoor games were very popular and well attended. The entire first floor of the Association was devoted to indoor games, library and reading room. We had a hall devoted to cards, a hall devoted to table tennis, a hall devoted to billiards, apart from games like carom, chess etc. So many members were participating that there used to be waiting for one's turn to play.



The Association used to conduct tournaments in all these games which were very popular and had its own standing. It also used to conduct annual tournaments for its members and their family.

Coffee and snacks were always available to the members and guests. Our Kutti used to take care of serving these items.

Our Association is different from clubs. It has three generations of a family as members. Since many women and children attend events at the association, it is desirable to keep the association atmospshere clean and healthy in appearance and habits.

Another popular section of the Association was the mess. It had a large membership and served homely and hygienic food. On festival days it catered the specialities of the festival, thus making the bachelors who were away from home get a feel of home food.

During 1989, the Association planned a Modern Auditorium for All Cultural activities. Separate Columns were erected fro m outside the building and construction of the second floor was started. At that time, Association's source of income was the rental from the three rooms and dormitory on the second floor. As these were dismantled due to renovation work, there was virtually no income to the association. Due to this financial constraint, the work was halted after erecting the roof of the second floor. Things came to such a pass that we could not pay the salaries of our staff, or pay power bills. Many times, we have pooled monies from among the committee members to meet such expenses.



So, the Manging committee of the time, in February 1993, went to Shri Siddhi Vinayak Temple at Prabhadevi, praying for a relief. The Siddhi Vinayak Temple of Prabhadevi had around that time clad their walls with marble. They donated the left-over marble to us. Believe me, within 15 days, our prayers were answered.



An International Company looking for premises for their Offices, came to us and hired our First floor giving us a rent which not only assured sustenance, but also to provide funds for our Auditorium Project. We had decided to install Shri Siddhi Vinayak in the Association as symbol of our trust in Him.

Two of our members, Shri Manjunathaiah and Dr Manjunath, generously offered to donate a Ganapathi idol to the Association. It was sculpted at the Artisan Training-cum-Production at Bidadi in Karnataka, by President's award-winning sculptor Shri. Ashok Gudigara. It was a replica of Hoysala style Ganapathi with some modifications. In this the trunk was turned to the right (balamuri) and instead of modaks it had a gyana mudra. The idol was four feet tall and was on a paanipeetha which was two feet high. The idol was carved out in black stone.

The idol was delivered at the Association in the course of time. It was kept in the foyer. Members, out of curiosity came to look at the idol. They said that a balamuri Ganapathi is very powerful and needs to be installed (Prathishtapane) properly and till that is done, it has to be kept covered. It will need to be offered Pooja every day. We kept the idol covered and asked Shri Hanumant Shastry, who did the Pooja at Association, during festivals to help us with pratishtapane. He said that this is a highly specialized area and he will find out who is the best person to conduct such a Pooja.

In the meanwhile, we identified the place where the idol is to be located and got the place clad with granite, all sourced from Bangalore. Hanumant Shastry brought the person who would conduct this rare Pooja. We were informed that this Pooja would be spread over two days and 'annadana' on both the days was important. We should conduct dhanyadivasa and jaladhivasa for the idol. The idol should be immersed in grains and in water as a part of consecration. Apart from this, homa and chanting of Vedas was necessary. Our president and his wife would do the Pooja on behalf of the





Association. Auspicious dates for the pratishtapane were fixed as 1st and 2nd of May 1995.

To watch this rare Pooja, our members and local neighbours gathered in large numbers. Ritwiks from Shankara Mutt recited Vedas. Ganapathi homa and Navagraha homa were conducted. Dhanyadivasa and Jaladhivasa were conducted and the idol was installed. The visitors were served food as prasadam. The event was very well attended. The Prana Pratishtana of Shri Siddhi Vinayaka was done on Akshaya Tritiya in 1995.



After the installation, Pooja is being offered to the idol every day. We introduced a scheme of 'Nitya Pooja' under which a person could pay a certain amount and select a date on which each year Pooja will be done on his behalf. Many members volunteered to offer 'Nitya Pooja' under this scheme. Since the Pooja was being done in the morning, it was difficult for office goers to attend the same. They requested if the Pooja could be in the evenings so that they could attend the same. In response to this request, one day in a week, on Tuesday a Pooja in the evening also was introduced. Many members started attending this, Pooja.

The presence of Ganapathi inspired many new activities. Our members used to do bhajans in front of the idol every Friday. They used to read Ganapathi sahasranama every Tuesday. Apart from daily Pooja, special pooja was done on Ganesha Chautrthi, Pratishtapanadina and Maghi Ganapathi and members participated in these in large number.

Shankaracharya of Kanchi and the Seer of Parkala Mutt have offered Pooja to this idol and given their anugrahabhashana to our members. The Seer of Parakala Mutt had conducted dolotsava at our association. He visited Mumbai again after some time and we suggested to the people who were organising his programme that we would like him to conduct the dolotsavat our association. But we were told that he has no time for dolotsava, but he would come to Association to give his anugrahabhashana. On the day of his visit, I got a call in the morning from one of the persons organising his programme. The Seer was insistent that he would do dolotsava at the Association and admonished them for telling us that he had no time. I told him that we would be very happy. We called up as many members as possible and informed them of the changed programme. We got the prasada organized from Ahobila Mutt. The function was well attended.

It is nearing three decades now since the Ganapathi has been installed. Pooja to Ganapathi is being conducted every day. It has given life to new activities at the Association and has helped in bringing many members together. May these activities grow over the years and may the Lord protect the Association.



# PUZZLES & TEASERS

1. **Puzzle:** A farmer has 17 sheep, and all but 9 die. How many are left?
2. **Puzzle:** Name ten or more things that you can wear on your feet that begin with the letter "s".
3. **Puzzle:** There are fourteen punctuation marks in English grammar. Can you name half of them?

## MIND STRETCHERS




**Each word in the pyramid has the letters of word above It, plus new latter given below are the clues.**
**1.Exist 2. Place to sleep 3. Lability**
**4.Introduction 5. Broken 6. Slowest 7.tripped**

## REBUS PUZZLE




**A.Two mothers and two daughters went out to eat, every one ate a burger, But only three burgers where eaten, how is it possible?**

**B.How many times in a day, are the hands of the clock in straight line but opposite in direction?**
**A.20 B.22 C.24 D.48**

---

**PUZZLES & TEASERS ANSWERS**

Puzzle 1 – Violin, Puzzle 2 – they all make a left turn, Puzzle 3 Arranged in the alphabet order
**<u>Spell in out:</u>** Easter & Island
How many squares do you see- **45**

***Quiz 3*** **A - B (W)** In the given alphabets last but one letter of the alphabets is 'Y'.10th letter to the left of 'Y' is 'O'. 8th letter to the right 'O' is 'W'.
**B - A (Actuate)**

***Compiled by: Mr Ananth Banwasi***

# ಹಿಂದೂ ಧರ್ಮದಲ್ಲಿ ಶೂದ್ರರು ಬ್ರಾಹ್ಮಣರಾಗಬಹುದೇ?

ನೇಸರು ಚರ್ಚೆ

ಇಂದು ರಾಷ್ಟ್ರದಲ್ಲೆಲ್ಲಿಯೂ ಆಗುತ್ತಿರುವ ಚರ್ಚೆಯಲ್ಲಿ ಬಾಹ್ಮಣರನ್ನು ದೂರಿ ಮಾಡುವ ಚರ್ಚೆಗಳೇ ಹೆಚ್ಚು. ಆದರೆ ದಿಟವಾದ ಪ್ರಶ್ನೆ, ಎಲ್ಲರೂ ಬ್ರಾಹ್ಮಣರಾದಾಗ ಎಲ್ಲ ದೂರಿಕೆಗಳೂ ನಿಲ್ಲುತ್ತವೆ. ಆದರೆ ನಮ್ಮಲ್ಲಿ ಇಂದು ಇರುವ 18% ಶೂದ್ರರು ಬ್ರಾಹ್ಮಣರಾಗಬಹುದೇ? ಹಿಂದೆ ವಾಲ್ಮೀಕಿ, ವ್ಯಾಸ, ಕನಕದಾಸ ಎಲ್ಲರೂ ಶೂದ್ರರಾಗಿ ಹುಟ್ಟಿದವರು. ಆಮೇಲೆ ತಮ್ಮ ತಿಳುವಳಿಕೆಯಿಂದ ನಡೆವಳಿಕೆಯಿಂದ ಬ್ರಾಹ್ಮಣರಾದವರು. ಶಾಸ್ತ್ರದಲ್ಲಿಯೇ 'ಹುಟ್ಟುವಾಗ ಎಲ್ಲರೂ ಶೂದ್ರರೇ, ಆಮೇಲೆ ತಮ್ಮ ತಿಳುವಳಿಕೆಯಿಂದ, ಎರಡನೆಯ ಹುಟ್ಟನ್ನು ಪಡೆದು ಬ್ರಾಹ್ಮಣರಾಗುತ್ತಾರೆ ಎಂದು ಹೇಳಿದೆ.

ಹಾಗಿದ್ದರೆ ಇಂದೇಕೆ ಇಂತಹ ಚರ್ಚೆ ದೂರುಗಳು ಬರುತಿವೆ? ಮನು ನೀತಿ ಶಾಸ್ತ್ರವನ್ನು ಓದದೆಯೇ ಅದನ್ನು ಬೈಯ್ಯುವುದರಲ್ಲಿ ತೊಡಗಿದವರು ಏಸೋ ಮಂದಿ. ಮನು ನೀತಿ ವರ್ಣ ಧರ್ಮವನ್ನು ಕುರಿತು ಮಾತಾಡಿದುರಲ್ಲಿ ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಅದೇ ಮನುನೀತಿ ಶಾಸ್ತ್ರ "ಕಾಲ ಬದಲಾಗುವಂತೆ ಸಮಾಜವೂ ಬದಲಾಗುವುದರಿಂದ ಸಾಮಾಜಿಕ ನೀತಿಗಳೂ ಕೂಡ ಕಾಲಕಾಲಕ್ಕೆ ಬದಲಾಗುತ್ತವೆ ಎಂದು ಹೇಳಿದೆ. ಇಂತೆ ಏಸೋ ಮಹಾನುಭಾವರು ಬ್ರಾಹ್ಮಣರಾದರು. ವಸಿಷ್ಠರ 101 ಮಕ್ಕಳಲ್ಲಿ ಕೇವಲ ಒಬ್ಬನೇ ಬ್ರಾಹ್ಮಣನಾದ. ಮಿಕ್ಕ 100 ಮಕ್ಕಳು ಚಂಡಾಲರಾದರು. ಅಂತೆಯೇ ಜಮದಗ್ನಿ - ರೇಣುಕಾದೇವಿಯ ಮಗ ಪರಶುರಾಮ. ಕೊಡಲಿ- ಕತಿ-ಬಿಲ್ಲು ಹಿಡಿದು ಕ್ಷತ್ರಿಯನಾದ.

ಈಗ ನಮ್ಮ ಸಂವಿಧಾನದಲ್ಲಿ ಸರ್ಕಾರ ಯಾರು ಯಾವ ಜಾತಿಯಲ್ಲಿ ಹುಟ್ಟಿದರು ಎಂದು ದಾಖಲು ಮಾಡುತ್ತದೆ. ಅದರಿಂದ ನೀವು ಪಾರಾಗುವುದೇ ಸಾಧ್ಯವಿಲ್ಲ. ಯಾವ ಜಾತಿಯ ತಂದೆಯ ಮಗ ಹುಟ್ಟಿದ ಕೂಡಲೇ ಅದೇ ಜಾತಿಯವನಾಗಿ ಹೋಗುತ್ತಾನೆ. ಅಮ್ಮ ಯಾವ ಜಾತಿಯವಳೇ ಆಗಿರಲಿ, ತಂದೆಯ ಜಾತಿಯೇ ಮಗನಿಗೆ. ಮೊದಲಲ್ಲಿ ಬ್ರಹ್ಮನಿಗೆ ಅವನ ಮನಸ್ಸಿನಿಂದಲೇ ಆರು ಮಕ್ಕಳು ಹುಟ್ಟಿದರಂತೆ. ಆಗ ಅವರೆಲ್ಲರೂ ವಯಸ್ಸಿಗೆ ಬಂದ ಕೂಡಲೇ ಇಲ್ಲಿಯೇ ಇದ್ದ ಮಾತಂಗ (ಮಾದಿಗ) ಮುನಿಯ ಆರು ಹುಡುಗಿಯರನ್ನೇ ಮದುವೆಯಾದರಂತೆ. ಆದರೆ ಅವರಿಗೆ ಈ ಜಾಗ ಕಡು ಕಟ್ಟಳೆಯಾಗಲಿಲ್ಲ.

ತಮಿಳುನಾಡಿನ ಹೆಣ್ಣು ಒಬ್ಬಳು, ಬ್ರಾಹ್ಮಣರ ಮನೆಯಲ್ಲಿಯೇ ಹುಟ್ಟಿ ಅನಂತರ ತನ್ನ ಮನಸ್ಸಿನಲ್ಲಿಯೇ ಒಬ್ಬ ದಲಿತನನ್ನು ಮದುವೆಯಾದಳು. ಆಮೇಲೆ ಮಕ್ಕಳೂ ಆದವು. ಆಕೆ ಸರ್ಕಾರಕ್ಕೆ ತನ್ನ ಹುಟ್ಟು ಪತವನ್ನು ಬದಲಾಯಿತ್ತಿ ತನ್ನ ಜಾತಿಯನ್ನು ಕೂಡ 'ದಲಿತ' ಎಂದು ನಮೂದಿಸಿ ಎಂದು ಕೇಳಿಕೊಂಡಳು. ಸರ್ಕಾರ 'ಇಲ್ಲ' ಎಂದಿತು. ಆಗ ಕೇಸು ಮದರಾಸಿನ ಹೈಕೋರ್ಟಿಗೆ ಹೋಯಿತು. ಎಲ್ಲಾ ವಿಚಾರಿಸಿದ ಮೇಲೆ ಅಲ್ಲಿನ ಇಬ್ಬರು ನ್ಯಾಯಾಧೀಶರು "ಒಂದು ಸಲ ಒಂದು ಜಾತಿಯ ಮೇಲೆ ಹುಟ್ಟಿದವರ ಜಾತಿಯನ್ನು ಬದಲಾಯಿಸಲಾಗುವುದಿಲ್ಲ" ಎಂದು ಮೇಜನ್ನು ಕುಟ್ಟಿದರು.

ಹೀಗಿದೆ ನಮ್ಮ ಸಂವಿಧಾನ ಅಂದರೆ ಬೇರೆ ಯಾವ "ವಿಧಾನ" ವೇ ಇಲ್ಲ. ಮನು ನೀತಿ ಶಾಸ್ತ್ರದ ಅನುಸಾರ ವ್ಯಾಸ, ವಿಶ್ವಾಮಿತ್ರ., ವಾಲ್ಮೀಕಿಗಳಿಗೆ ಈ ಹಕ್ಕಿದ್ದರೂ, ಅದನ್ನು ಕಿತ್ತುಕೊಂಡು ಈಗ ನೀನು "ಬ್ರಾಹ್ಮಣನಾಗುವುದಿಲ್ಲ" ಎನ್ನುವುದಂತಿರಲಿ. "ಈಗ ನೀನು ಶೂದ್ರನೂ ಆಗುವಂತಿಲ್ಲ" ಎಂದಿದೆ ನಮ್ಮ ಅಂಬೇಡ್ಕರ್ ನೀತಿ. ಅದನ್ನೇ ದಿನ ಬೆಳಿಗ್ಗೆ ಎದ್ದು "ನಮ್ಮ ಸಂವಿಧಾನ, ನಮ್ಮ ಸಂವಿಧಾನ ಎಂದು ಕೊಂಡಾಡಿದ್ದೇನು? ಆಹಾ!!!

## ಹಾಸ್ಯ

ಮಾತುಗಾರ ಗುಂಡ...

ಶಾಲೆಯಿಂದ ಬಂದು, ಅಪ್ಪನಿಗೆ ತೋರಿದ ಗುಂಡನ ಮಾರ್ಕ್ಸ್ ಕಾರ್ಡ್ ನೋಡಿ ಅಪ್ಪ ರೇಗಿದರು.

ಏನು ಇಷ್ಟು ಕಡಿಮೆ ನಂಬರ್ ತೊಗೊಂಡಿದೀಯಾ??

ಈಗ ತಾನೇ ಪಕ್ಕದ ಮನೆ ರವಿ ನಿನ್ನ ಕ್ಲಾಸ್ ಮೇಟ್ ಬಂದು ಹೇಳಿದ ಅವನು ತರಗತಿಗೇ ಫಸ್ಟ್ ಬಂದಿದಾನಂತೆ????

ಗುಂಡ: ಅಪ್ಪ ಯಾಕೆ ರೇಗ್ತೀರಾ ನೀವೇ ಜ್ಞಾಪಿಸಿ ಕೊಳ್ಳಿ ನಿನ್ನೆ ಏನು ಹೇಳಿದ್ರೀ ಅಂತ.

ಅಪ್ಪ: ಏನು?????

ಜೀವನದಲ್ಲಿ ಮತ್ತೊಬ್ಬರೊಂದಿಗೆ ಕಂಪಾರಿಸನ್ ಮಾಡಬಾರದು ಅಂತ, ನಿನ್ನಂತೆ ಮತ್ತೊಬ್ಬರು ಎಂದು ತಿಳಿ. ನಿನ್ನಂತೆ ಎಲ್ಲರನ್ನೂ ಭಾವಿಸು ಅಂತ..

ರವಿ ಫಸ್ಟ್ ಬಂದ್ರೂ, ನಾನು ಬಂದ್ರೂ ಏನಂತೆ..

ನನ್ನಂತೆ ಅವನು ,ಅವನಂತೆಯೇ ನಾನು ಅಲ್ವಾ???

ಅಪ್ಪ ಸುಸ್ತಾದರು.

✍ ಸುಮನಾ

# HINDU TRADITION/RELIGION OVER THE YEARS



✍ Dr. B R Manjunath

**(Continued from previous Issue)**

India or Bharath is not the only country, where such questions were raised and perused. But in the Desert Lands, where living was very hard without any Water or shelter, everything was left to GOD and his Prophets. People believed in the Prophets and their Rules, as all of them promised HEAVEN where GOD lived. This is the same in Vedic Dharma as well, where the belief of HEAVEN above and HELL below is expounded. If you do not, please God, be it Jehova, God, Allah, ZEUS or Indra, you were not let in to Heaven after you die. None of these religions have any concept of REBIRTH. Thus, the Vaidik Dharma is akin to Abrahamic religions.

But gradually as the influence of Yagnya and yaagas to please GOD were taking a decline, Upanishads rose to propagate the concepts of Universal Energy/ PARAA BRAHMA, which manifests as many, the Religion took a different turn. The effects of Jain Tirthankaras, who preached ATNAN/SOUL, KARMA, and REBIRTH the HINDU Tradition took a different turn. The Jains preaching of ARI SHADVARGA, meaning SIX INNER ENEMIES OF MAN, its concept of KAIVALYA or MOKSHA also changed the Hindu tradition. The focus of attaining Heaven after Death, changed to our own KARMA and its effect on our rebirth. The Vaidk Tradition is designed for Householder, who has to have Desire, Wealth and a Code of Conduct. Jainism, Buddhism, Advaita, all of them abhorred of any action which was carried out to get rewards. NISHKAMA KARMA became the corner stone of Hindu Tradition, during the period of 800 BC till 2nd Century AD…

We need ti discuss here the changing scenario in north of Vindhya and south of Vindhya as foreign influences were different. While the Greeks came across the Himalayas in 450 BC, there were no other influences from 450 BC till 200 Ad, when Kanishka came, However, Kanishka accepted Buddhas teachings and as such his invasions did not matter. To the culture here in. But in the south, where Trading between Arabia and Kerala was continuing for ages, the effect of Abrahamic religions were great.

First, the Jews were traders for a longtime. But after the romans conquered Jerusalem, some Jews migrated to India and set up their Prayer Halls in here. Thereafter, St. Thomas, one of the disciples of Jesus travelled to India/Kerala, in 42 AD, and converted many Ezlavas to Christianity. He went on a mission to preach Christianity and convert many people. He travelled across Kerala and Tamilnadu converting many Dalits. He was assassinated in 44 AD, near Chennai. His tomb is still there on Mount Chennai. The Church he established was called Syrian Church and all the followers called themselves as Syrian Christians

He went on preaching Devotion to GOD his SON, and the HOLY GHOST. What is HOLY GHOST?

HOLY GHOST is the Love that is shared between the LORD and his DEVOTEE. This is the origin of BHAKTI Movement in South. BHAKTI comes from the root BHAAGA meaning a share. The LORD is BHAAGAVANTA and the Devotee is BHAAGAVATA or BHAAGATA/ BHAKTA as Ka and Ga are interchangeable in Indian languages.

We need to also pay attention to History. In the 7th century where Arabia went through a Turmoil due to wars between Mohammed's Islamic armies and defending Arabs Armies, many Arabs who were converted to Islam came to India and started preaching Islam. What is the meaning of ISLAM.? Islam means SURRENDER. Surrender to Allah without Questioning. Questioning is sone

of the Fundamental processes in Indian Tradition. That is how Knowledge were pursued by Questioning. But Abrahamic regions never permitted any Questioning. You just accept what the Prophet says and the Book says. You do not go beyond that.

There was no MONOTHEISM in India. Everyone had different names for their GODS and stories associated with them. Between 8-10 century AD, Alwars who were Dalits were influenced by the preaching of Universal Brotherhood and the Love Between God and his Devotee. You can influence God by your Love. Ramanuja Acharya who was a student of Yadava Acharya, was trained in Advaita, which taught that the Universal Energy is One, and it manifests as Many. But Ramanuja questioned," If I am also Paramaatma, how can I be covered with MAYA or ILLUSION.?" He rejected Advaita and accepted Dwaita. He also accepted VISHNU as the only God. Thus, Dwaita became Monotheistic. Ramanuja also adopted the techniques of Abrahamic religions and went on a Conversion Mission. He said who accepts Sri Hari as their God and recites Harinama and wears a Naama on their Forehead is a Shri Vaishnava. He converted many Dalits, Jains, Brahmins and other castes into Shri Vaishnavites. As he negated Shiva s a God, the Cchila King Kulothunga banished him from Tamilnadu, and Ramanuja come over to the Hoysala Kingdom and converted the King and his Courtiers. He then went on a Mission of converting all Shiva temples in to Vishnu Temples. Famous among these are Tirumala in Andhra and Lingaraja temples in Orissa. He also accepted the Abrahamic religions' requirement of SURRENDER. He termed it as SHARANARTI OR PRAPATTI.

The Vaishnava Pantha further thrived from 12th century AD under Madhva Acharya, who accepted all Abrhamic religion concepts. Heaven and Hell concepts which had totally declined during the influence of Advaita, Buddhism and Jainism, once again became the LURING and FEARING Concepts. During The period between 10 the century AD and the 17th century many Puranas or stories were developed to create the influence of Vaishnava Siddhanta.

During the same period, the Shaivites also embarked upon spreading Shaivism, by converting many from all castes. They also composed many Stories to spread the Greatness of Shiva is the only God. Because many Royals supported the Shaivites and Vaishnavites, they could go on with their Mission of conversion.

Things were taken to Extreme, when Vaishnavites adopted the Islamic concept of worshipping Tombs of Saints, DARGAH, and built BRINDAVANs around the tombs of their yester year Gurus.

In the north after the 10thcentury AD when Ghazni Mohammed came several times to destroy Temples and loot them, and later under Tugalak regime, Avaguntan for ladies became a code of dressing. The Mughal dress code became the dress code for Men.

Vaishnavism travelled from Kernatka to Mharshtra in the 15-16 century AD and to Gujarat, Mahyaprades, Rajasthan and Uttar Pradesh in the 17th century. All Haridasas in the north are from 16th century onwards. Along with Bhakti Movement came the Abrrahmic Monotheism and surrender concepts.

Today in Hinduism it is the Bhakti tradition that is the Prime Path. All Vedic, and Adwaita traditions are secondary. Therefore, it is incorrect to claim Hinduism as being NOT influenced by Abrahamic religions. Ordinary people are always looking for a God to save them. Your own Karma decides your fate does not appeal to them. They need some God to save them. This is how Jainism, Buddhism and Advaita failed in this Land.

# What is the original script used to write Sanskrit?

- NESARU Compilation

**As far as we know, it is true that Sanskrit does not have a script exclusive to itself which can rightfully be called its own.**

However, it must have had one at some point of its unchronicled history. And going by its grammatical rules, I strongly suspect that its original orthography must be akin to the writing conventions of the Roman script. We don't know in which script the language used to be written in, when it was a living language i.e., 4,000 years ago, of which period we are unfortunately not left with any archaeological evidence. Ancient Sanskrit literature describes only the sounds in the language but not their shapes as manifest in writing. Based on the archaeological evidence available, some opine that Brahmi must be the first and original script used to write Sanskrit. However, a point worthy of note is - that the same evidence points to the fact that the script had come into existence long after the language went out of popular use.

*Lalitha Vistaram*, a very ancient but undated Buddhist text of hagiography makes mention of the names of 64 different scripts besides Brahmi, to have been in vogue during its contemporary times. But we are clueless as to which one among them was especially used for writing the language. The names of several scripts mentioned therein seem to suggest that they might have been in use outside Greater India.

A LIST OF THE 64 SCRIPTS MENTIONED IN *Lalitha Vistaram*

1. Brahmi 2. Kharosti 3. Pushkarasara lipi 4. Anga-lipi 5. Vanga-lipi 6. Magadha-lipi

7. Mangalya-lipi 8. Anguliya-lipi 9. Sakara-lipi 10. Brahmava-lipi 11. Parushya-lipi

12. Dravida-lipi 13. Kirata-lipi 14. Dakshinya-lipi 15. Ugra-lipi 16. Samkhya-lipi

17. Anuloma-lipi 18. Avamurdha-lipi 19. Darada-lipi 20. Khasya-lipi 21. Cina-lipi

22. Luna-lipi 23. Huna-lipi 24. Madhyaksaravistara-lipi 25. Puspa-lipi 26. Deva-lipi

27. Naga lipi 28. Yaksa-lipi 29. Gandhava-lipi 30. Kinnara-lipi 31. Mhoragalipi 32. Asura-lipi 33. Garuda-lipi 34. Mrgacakra-lipi 35. Vayasaruta-lipi 36. Bhaumadevi-lipi

37. Antariksadeva-lipi 38. Uttarakurudvipa-lipi 39. Aparagaudana-lipi 40. Purvavideha-lipi

41. Utksepa-lipi 42. Niksepavarta-lipi 43. Viksepa-lipi 44. Praksepa-lipi 45. Sagara-lipi

46. Vajra-lipi 47. Lekhapratilekha-lipi 48. Anudruta-lipi 49. Sastravarta-lipi

50. Gananavarta-lipi 51. Utksepavarta-lipi 52. Niksepavarta-lipi 53. Padalikhita-lipi

54. Dviruttarapadasandhi-lipi 55. Yavaddasottarapadasandhi-lipi 56. Madhyaharini-lipi

57. Sarvarutasamgrahanilipi 58. Vidyanulomavimisritalipi 59. Rsitapastaptarocamanalipi

60. Dharanipreksinilipi 61. Gaganapreksinilipi 62. Sarvausadhinisyandalipi

63. Sarvasarasamgrahinilipi 64. Sarvabhutarutagrahanilipi

**DEVANAGARI SCRIPT:** Though Sanskrit is commonly written in Devanagari now, the script used to be only one of the regional scripts in India and did not have a national character before 1950 when Hindi in Devanagari was made the administrative language of India. Most Sanskrit and Vedic scholars in the country esp. those belonging to the South and the East who were born before 1950, did not know Devanagari because they used to read and write Sanskrit in their respective regional scripts. Even now, most of the qualified and acclaimed scholars, as also the commoners in these regions find it more comfortable to read the liturgical language of Hinduism in the scripts of their own mother tongues than Devanagari, though they formally trained to read the latter. In these parts of the country, Sanskrit texts are still printed in the regional scripts but not Devanagari. So, Devanagari happens to be just one of the scripts used to write Sanskrit

**Is Devanagari truly an appropriate script for writing Sanskrit?**

Before answering this question, it must be borne in mind that *the ability of scripts to render speech is limited by the pronunciation habits of the people who use them.* Not being 'the own or original script' of Sanskrit, the application of Devanagari to Sanskrit is, in fact, as good as applying the Roman script to the same. The reason being that the script is actually used to write several schwa-deleted languages like Hindi, Marathi and Nepali the speakers of which have a profound problem pronouncing any अकार in a word other than the initial and the penultimate ones. i.e., except these two, they tend to render almost all अकार's in a word हलन्त's. Schwa-deletion accustoms the reader to perceive a Sanskrit word not as a whole organic morpheme but as an assembled set of several monosyllables and bisyllables and cut the word into such pieces. As such he/she will be unable to pronounce any word containing more than 3 syllables, whereas Sanskrit cannot do without longer words and *samasas*.

For example, they pronounce the Sanskrit proverb विनाशकाले विपरीत बुद्धिः *(vinaasa-kaale vipareeta buddhih)* as **'vinaash kaale vipreet buddhee'.** Similarly, they pronounce नमश्शिवाय *(Namas sivaaya*) as **Namash shivaay,** thus deleting one of the 5 letters of the famed

Panchaakshari Mantra. Do you call such a pronunciation Sanskrit? They are hard trained since childhood to ignore or treat all अकार's in a Devanagari word as हलन्त. So, they end up pronouncing Sanskrit like Hindi. So effectively, even Devanagari became a schwa-deleted script and therefore, diction-wise disabled one along with the languages which are written in it.

Therefore, it is evident that Devanagari is not a proper script suitable for writing Sanskrit now. Should you use it for Sanskrit, first off, you need to unlearn all the ingrained habits of schwa-deletion. But it will be a brand-new thing for North Indians and might pose extreme psychological and practical difficulties for them. Even now, many of them try it but fail. Their pronunciation of Sanskrit अकार often sounds artificial and full of stress and struggle. Not just Devanagari, but almost all of its cousins suffer from same/ similar irregularities and inadequacies. For example, all North and East Indians are endlessly confused between श and ष. They treat and pronounce both as one and the same letter. With this type of speech and reading habits having taken root and spread far and wide, it will be difficult to preserve our ancient Sanskrit heritage in Devanagari and allied scripts in a flawless manner. Then, which script to use?

In my personal opinion, either the Malayalam or the Chaalukya script (the Telugu-Kannada script) is best suited for writing and pronouncing Sanskrit.

**ಅಸೋಸಿಯೇಷನ್ನಿನಲ್ಲಿ ಮುಂಬರುವ ಕಾರ್ಯಕ್ರಮಗಳು**

**ಅಕ್ಟೋಬರ್ 7, 2023, ಮಧ್ಯಾಹ್ನ 2.30 ಘಂಟೆಗೆ**

ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ, ಹವ್ಯಕ ವೆಲ್ಫೇರ್ ಟ್ರಸ್ಟ್,

ಮುಂಬಯಿ  ಹಾಗೂ ಮೈಸೂರು ಅಸೋಸಿಯೇಶನ್, ಮುಂಬಯಿ

ಒಟ್ಟು ಸೇರಿ ನಡೆಸಿಕೊಡುವ

**"ನೀಲಿನಕ್ಷೆ"** ಪುಸ್ತಕ ಬಿಡುಗಡೆ ಕಾರ್ಯಕ್ರಮ.

ಲೇಖಕಿ **ಶ್ರೀಮತಿ ಅಮಿತಾ ಭಾಗವತ್**

ಅಕ್ಟೋಬರ್ 22, 2023 ಸಂಜೆ 5.30ಕ್ಕೆ ನವರಾತ್ರಿ ಪ್ರಯುಕ್ತ

**ಶಾರದಾ ಪೂಜೆ ಮತ್ತು ಸದಸ್ಯರಿಂದ ಕೋಲಾಟ ಕಾರ್ಯಕ್ರಮ**

# ಸ್ವರ್ಣಗೌರಿ ಮತ್ತು ವರಸಿದ್ಧಿ ವಿನಾಯಕರ ಹಬ್ಬ

ಪ್ರತಿ ವರ್ಷದಂತೆ ಈ ವರ್ಷವೂ ಮೈಸೂರು ಅಸೋಸಿಯೇಶಲ್ಲಿ ಭಾದ್ರಪದ ಮಾಸದ ಶುಕ್ಲ ತದಿಗೆಯಂದು ಸ್ವರ್ಣಗೌರಿ ಮತ್ತು ಚೌತಿಯಂದು ವರಸಿದ್ಧಿ ವಿನಾಯಕರ ಹಬ್ಬವನ್ನು ಮಾಡುವುದು ನಿಶ್ಚಿತವಾಗಿತ್ತು. ಈ ವರ್ಷ ನಮ್ಮ ಮೈಸೂರು ಪಂಚಾಂಗಗಳಲ್ಲಿ ಎ.ರಡೂ ಹಬ್ಬಗಳನ್ನು ಸೆಪ್ಟೆಂಬರ್ 18ರಂದೇ ಆಚರಿಸಬೇಕೆಂದಿತ್ತು. ಆದರೆ ಮುಂಬೈನಲ್ಲಿ ಕಾಲನಿರ್ಣಯ ಪಂಚಾಂಗದ ಪ್ರಕಾರ ಗಣೇಶನ ಹಬ್ಬ ಸೆಪ್ಟೆಂಬರ್ 19ಕ್ಕೆ ಎಂದಿದ್ದು, ಶಾಲಾ ಕಾಲೇಜುಗಳು, ಬ್ಯಾಂಕ್, ಇತರ ಆಫೀಸುಗಳಿಗೆ 19ರಂದೇ ರಜೆ ನಿರ್ಧಾರವಾಗಿತ್ತು. ಹೀಗಾಗಿ ಮೈಸೂರು ಅಸೋಸಿಯೇಶನ್‌ನಲ್ಲಿ ಸೆಪ್ಟೆಂಬರ್ 18ಕ್ಕೆ ಗೌರಿ ಪೂಜೆ ಮತ್ತು ಸೆಪ್ಟೆಂಬರ್ 19ಕ್ಕೆ ಗಣೇಶನ ಪೂಜೆ ಮಾಡುವುದು ಅನಿವಾರ್ಯವಾಯಿತು.





ಗೌರಿ ಪೂಜೆಯನ್ನು ಬೆಳಗಿನ ಎಷ್ಟು ಗಂಟೆಗೆ ಪೂಜೆ ಮಾಡುವುದು ಎನ್ನುವ ವಿಷಯಕ್ಕೆ ಮತ್ತೊಂದು ಸಮಸ್ಯೆ ಎದುರಾಯಿತು. ಸೆಪ್ಟೆಂಬರ್ 18 ಸೋಮವಾರ, ಅಂದು ಬೆಳಗ್ಗೆ 7.30ರಿಂದ 9.00ರ ವರೆಗೆ ರಾಹುಕಾಲ. ಪೂಜೆ 7.30ರ ಮೊದಲು ಆರಂಭಿಸಬೇಕು, ಇಲ್ಲವಾದರೆ ತದಿಗೆ ಮುಗಿದು ಹೋಗುತ್ತದೆ. ಅಷ್ಟು ಬೆಳಿಗ್ಗೆ ಹೆಣ್ಣು ಮಕ್ಕಳಿಗೆ ಮನೆಯ ಎಲ್ಲ ತಯಾರಿ ಮುಗಿಸಿ ಹೊರಟು ಬರಲು ಸಾಧ್ಯವೇ ಅನ್ನುವ ಪ್ರಶ್ನೆ ಕಾಡಿತು. ಯಾರು ಬಂದರೆ ಅವರಿಂದ ಪೂಜೆ ಆರಂಭಿಸುತ್ತೇನೆ, ಉಳಿದವರು ಬಂದು ಸೇರಿಕೊಳ್ಳಲಿ ಎಂದು ಭಟ್ಟರು ಸಲಹೆ ಕೊಟ್ಟರು. ಅದರಂತೆ ಅಂದು ಬೆಳಿಗ್ಗೆ 7.10ಕ್ಕೆ ಲಕ್ಷ್ಮಿ ಸೀತಾರಾಂ, ಕಮಲಾ, ರಮಾ, ವೀಣಾ ಮತ್ತು ಭವಾನಿ ಬಂದು ಪೂಜೆಗೆ ಅಣಿಯಾಗಿ ಕೂತರು. ಭಟ್ಟರು ಮೊದಲಿಗೆ ಸಂಕಲ್ಪ ಮಾಡಿಸಿ ಮಹಾಗಣಪತಿ ಪೂಜೆ ಮಾಡಿಸುವ ಹೊತ್ತಿಗೆ ಸೌಮ್ಯ, ಪದ್ಮ, ರೇಶ್ಮಾ ಮತ್ತು ಲಲಿತಾ ನವಿಲೇಕರ್ ಬಂದು ಸೇರಿದರು. ಎಲ್ಲ ಸೇರಿ ಭಟ್ಟರ ಮಾರ್ಗದರ್ಶನದಲ್ಲಿ ಸಾಂಗವಾಗಿ ಸ್ವರ್ಣಗೌರಿ ಪೂಜೆಯನ್ನು ನೆರವೇರಿಸಿದರು. ಪೂಜೆಯಾದ ನಂತರ ಎಲ್ಲರೂ ಗೌರಿಗೆ ಆರತಿ ಮಾಡಿ, ಒಬ್ಬರಿಗೊಬ್ಬರು ಅರಿಶಿಣ ಕುಂಕುಮ, ಬಾಗಿನ ಕೊಟ್ಟು ಸಂಭ್ರಮಿಸಿದರು. ನಂತರ ಎಲ್ಲರಿಗೂ ಪ್ರಸಾದ ವಿತರಣೆಯಾಯ್ತು.



ದಂಪತಿಗಳೇ ಸಂಕಲ್ಪ ಕೈಗೊಂಡು ವಿನಾಯಕನ ಪೂಜೆ ಮಾಡುವುದು ಮೈಸೂರು ಅಸೋಸಿಯೇಶನ್‌ನಲ್ಲಿ ಮೊದಲಿನಿಂದ ನಡೆದು ಬಂದ ಪದ್ಧತಿ. ಅಂತೆಯೇ ಮರುದಿನ ಸೆಪ್ಟೆಂಬರ್ 19ರಂದು ಶ್ರೀಯುತ ಶ್ರೀಪಾದ ದೇಶಪಾಂಡೆ ಹಾಗೂ ಅವರ ಪತ್ನಿ ಶ್ರೀಮತಿ ಆರತಿ



ದೇಶಪಾಂಡೆ ದಂಪತಿ ವರಸಿದ್ಧಿ ವಿನಾಯಕ ಸ್ವಾಮಿಯ ಪೂಜೆ ನೆರವೇರಿಸಿ ಕೊಟ್ಟರು. ಅಂದು ಕೂಡ ಮೊದಲಿಗೆ ಮಹಾಗಣಪತಿ ಪೂಜೆ, ನಂತರ ಗೌರಿ ಮಂಗಳಾರತಿ ನಂತರ ವರಸಿದ್ಧಿ ವಿನಾಯಕ ಪೂಜೆ ನೆರವೇರಿತು. ಹಿಂದಿನ ದಿನದಂತೆ ಪೂಜೆಯ ನಂತರ ಗೌರಿ ಗಣೇಶರಿಗೆ



ಆರತಿ ಮಾಡಿ, ಪ್ರಸಾದ ವಿನಿಯೋಗ ಮಾಡಲಾಯಿತು.

ಮುಂದೆ ನಾಲ್ಕು ದಿನ ಸಂಜೆಗೆ ಭಜನೆಯ ಕಾರ್ಯ ಕ್ರಮವಿತ್ತು. ಬುಧವಾರ ಶ್ರೀಮತಿ ಸುಶೀಲಾ ದೇವಾಡಿಗ ಅವರು ಒಬ್ಬರೇ ಸುಮಾರು ಮುಕ್ಕಾಲು ತಾಸು ಸುಶ್ರಾವ್ಯವಾಗಿ ಗಣೇಶನ ಮೇಲೆ ದೇವರ ನಾಮಗಳನ್ನು ಹಾಡಿ ರಂಜಿಸಿದರು. ಗುರುವಾರ ವಿವಿಧ ಗಾಯಕರಿಂದ ಶ್ರೀ ಗಣೇಶನ ಭಜನೆಯ ಸುರುಳಿಯಲ್ಲಿ ಹಾಡಿನ ಸೇವೆಯಾಯಿತು. ಶುಕ್ರವಾರ



ಗೋಕುಲ ಮಹಿಳಾ ತಂಡದವರಿಂದ ಒಂದೂವರೆ ತಾಸು ಭಜನೆ ನಡೆಯಿತು. ಅಂದು ಹೆಣ್ಣು ಮಕ್ಕಳಿಗೆ ಅರಿಶಿಣ ಕುಂಕುಮದ ಕಾಯಕ್ರಮವೂ ಇತ್ತು. ವೀಣಾ, ರೇಶ್ಮಾ ಮತ್ತು ಸುಮಾ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶನಿವಾರ ವಿದುಷಿ ಶ್ರೀಮತಿ ಶ್ಯಾಮಲಾ ರಾಧೇಶ್ ಅವರು ಒಂದು ತಾಸು ಸುಂದರವಾಗಿ ಹಾಡಿ ತಮ್ಮ ಸೇವಾರ್ಥವನ್ನು ಸಲ್ಲಿಸಿದರು.

ರವಿವಾರ ಬೆಳಿಗ್ಗೆ 9.00 ಗಂಟೆಗೆ ಭಟ್ಟರು ಗೌರಿ ಗಣೇಶನ ವಿಸರ್ಜನೆಗೆ ಪೂರ್ವದ ಪೂಜೆ ಮಾಡಿಸಿದ್ದಾಯ್ತು. ಆನಂತರ ಸಹಸ್ರ ನಾಮಾರ್ಚನೆ, ಅಷ್ಟೋತ್ತರ, ದೇವರ ನಾಮ, ಭಜನೆ, ಎಲ್ಲ ನಡೆದು ಮಹಾಮಂಗಳಾರತಿ, ಪುಷ್ಪಾರ್ಚನೆಗಳಾದವು. ಮೈಸೂರು ಅಸೋಸಿಯೇಶನ್ ಗೌರಿ ಗಣಪತಿಗೆ ಜೈಕಾರ ಹಾಕುತ್ತ ವಿಸರ್ಜನೆಗೆ ಮರವಣಿಗೆ ಹೊರಟಿತು. ದಾದರ್ ಚೌಪಾಟಿಯಲ್ಲಿ ದೇವರನ್ನು ಕೊನೆಯ ಬಾರಿಗೆ ಪೂಜಿಸಿ ಮಂಗಳಾರತಿ ಮಾಡಿ ವಿಶಾಲವಾದ ಅರಬ್ಬೀ ಸಮುದ್ರದಲ್ಲಿ ಕಳಿಸಿಕೊಟ್ಟು ಭಾರವಾದ ಮನಸ್ಸಿನಿಂದ ಸದಸ್ಯರು ಹಿಂತಿರುಗಿದರು.





Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077